
ಕೊರವಂಜಿ



Koravanji

ನವೆಂಬರ್

೧೯೬೦

★

ಸಂಪಾದಕರು

ಶ್ರೀ|| ರಾ. ಶಿ.

ಬರಹಗಾರರು :

ಶ್ರೀ|| ದಾಶರಥಿ ದೀಕ್ಷಿತ್

ಶ್ರೀ|| ರಾಮು

ಶ್ರೀ|| ಶ್ರೀರಂಗ್

ಶ್ರೀ|| ಎಚ್ಚೆಮ್ಮಿ

ಶ್ರೀ|| ಅ. ರಾ. ಸೇ.

ಶ್ರೀ|| ಶಿಟ್ಟಣ್ಣ

ಶ್ರೀ|| ಡೂನು

ಶ್ರೀ|| ಕೇಫ

ಇತ್ಯಾದಿ, ಇತ್ಯಾದಿ.

ತಿಳಿನಗೆಯ ಮಾಸಪತ್ರಿಕೆ



— ವೈಟೋಫೆರಿನ್ —

(ಆಧುನಿಕ ಶಕ್ತಿವರ್ಧಕ ಟಾನಿಕ್)

ಇದರಲ್ಲಿ "ಎ" "ಬಿ" ಮತ್ತು "ಡಿ" ಎಂಬ ವೈಟಮಿನ್ನುಗಳೂ ಐರನ್, ಕ್ಯಾಲ್ಸಿಯಂ ಮುಂತಾದ ಲೋಹ ವಿಶೇಷಗಳೂ, ಶುದ್ಧಗೊಳಿಸಿದ ತಾಮ್ರವೂ, ಮತ್ತು ಮಾಲ್ಟ್‌ಸಾರ, ಜೇನುತುಪ್ಪಗಳನ್ನು ಸೇರಿಸಿ ತಯಾರಿಸಿದ ಒಂದು ಅಮೃತಪಾನ. ಇದರಲ್ಲಿ ದೇಹಶಕ್ತಿಗೆ ಬೇಕಾದ ಸಕಲ ಔಷಧಗಳ ಸಮೂಹವೂ ಇದೆ. ಖಾಯಿಲೆಯಿಂದ ಎದ್ದವರಿಗೂ, ಬಸುರಿ ಬಾಣಂತಿಯರ ದೇಹದಾರ್ಢ್ಯಕ್ಕೂ ಇದು ಅತ್ಯುತ್ತಮವಾದ ಔಷಧ. ಸೇವಿಸಲು ಬಹಳ ರುಚಿಯಾಗಿಯೂ ಮತ್ತು ಮಧುರವಾಗಿಯೂ ಇದೆ.

★ ★

ತಯಾರಕರು:

ದಿ ಮೈಸೂರು ಇಂಡಸ್ಟ್ರಿಯಲ್ ಅಂಡ್ ಟೆಸ್ಟಿಂಗ್ ಲ್ಯಾಬೋರಟರಿ ಲಿಮಿಟೆಡ್,

ಮಲ್ಲೇಶ್ವರಂ - - - ಬೆಂಗಳೂರು ೩

ಕೊರವಂಜಿ

★ ಕುಹಕಿಡಿಗಳು ★

ಸಂಪುಟ ೨೩ ನವೆಂಬರ್ ೧೯೬೦ ಸಂಚಿಕೆ ೪

ಯೂನೋ ಸಭೆಯಲ್ಲಿ ಕೃಶ್ಚೇವರು ಬೂಟ್ಸಿನಿಂದ ಮೇಜನ್ನು ಕುಟ್ಟಿದರಂತೆ!

—ಕಾಲು ಕೆರೆದು ಜಗಳ ಮಾಡಲು ಬೂಟ್ಸನ್ನು ಬಿಚ್ಚಲೇ ಬೇಕಲ್ಲವೇ?

* * * *

ಅಖಿಲ ಭಾರತ ಸಮ್ಮೇಳನಗಳಿಂದ ಏನೊಂದೂ ಪ್ರಯೋಜನವಿಲ್ಲ. (ಪತ್ರಿಕೆ)

—ಸುಳ್ಳು. ಇನ್ನೊಂದೆರಡು ಸಮ್ಮೇಳನಗಳು ನಡೆದರೆ, ನಮ್ಮೂರು ಫೋಟೋಗ್ರಾಫರುಗಳು ಮೂರಂತಸ್ತಿನ ಮನೆ ಕಟ್ಟಿಸಿಬಿಡುತ್ತಾರೆ!

* * * *

ವಿಧಾನಸಭೆಯಲ್ಲಿ ರೇಗಿದ ಒಬ್ಬಾತ ಇನ್ನೊಬ್ಬಾತನ ಕಿವಿಗಳನ್ನು ಹಿಡಿದು ಎತ್ತಿ, ಕುಕ್ಕರಿಸಿದನಂತೆ,

—ಕಂತ್ರೀನೋ, ಕಸೀನೋ ನೋಡುಕ್ಕೆ ಇರಬೇಕು!!

* * * *

೨೪೮ ಎಂ.ಎಲ್.ಎ.ಗಳು ಹೇಳಿಕೆ ಕೊಟ್ಟಮೇಲೆ, ಡಾ|| ಸಂಪೂರ್ಣಾನಂದರು ಅರ್ಧವಾದರೂ ಆನಂದರಾದರಂತೆ!!

* * * *

ದೀಪಾವಳಿ ಹಬ್ಬದಂದು, ಕ್ಲಬ್ಬಿನಲ್ಲಿ ಕೇಳಿಬಂದ ಟಪ್ ಡಬ್ ಶಬ್ದಗಳು ಪಟಾಕಿ ಹಾರಿಸಿದ್ದರಿಂದ ಅಲ್ಲವಂತೆ,

—ಶೀಷೆ ಬಿರಡೆಗಳನ್ನು ರಭಸದಿಂದ ತೆಗೆದರಂತೆ, ಅಷ್ಟೇ!!

* * * *

ಅಮೆರಿಕಾದ ಚುನಾವಣೆಯಲ್ಲಿ, ಪುರಟ್ಟು ತಿಂಡಿ, ಕುಡಿತ, ಧರ್ಮಕ್ಕೆ ಕೊಡುವ ಧೋತ್ರ ಇವುಗಳ ವೆಚ್ಚ, ಕೆನ್ನಡಿಯವರಿಗೆ ಎಷ್ಟು, ನಿಕ್ಸನ್‌ರವರಿಗೆ ಎಷ್ಟು ಎಂಬುದು ನಿಖರವಾಗಿಲ್ಲವಂತೆ!

ಡಾಕ್ಟರ್ ಅಂಥಂಥವರು ಏನು ಬರೆಯುತ್ತಾರೋ ಅದನ್ನು ಅವರು ಚೆನ್ನಾಗಿ ತಿಳಿದುಕೊಂಡಿದ್ದಾರೆ. (ಹೇಳಿಕೆ)

—ಅಷ್ಟೇ ಅಲ್ಲದೆ ಅದು ಇನ್ನಾರಿಗೂ ತಿಳಿಯುಬರುವುದಿಲ್ಲ. ಅದರಿಂದಲೇ ಅವರು ಪ್ರಸಿದ್ಧರಾಗಿರುವುದು !

* * * *

ಸ್ಟೇಟ್ ಟ್ರೇಡಿಂಗ್ ಕಾರ್ಪೊರೇಷನ್ ಇಲ್ಲದೆ ಇದ್ದಿದ್ದರೆ, ಮುಗ್ಗಿಹೋದ ರಾಗೀನ ನಾವು ಹೇಗೆ ಮಾರುಕ್ಕೆ ಆಗುತ್ತದೆ ಎಂದು ಪುಡಾರಿ ನಾಯಕರೊಬ್ಬರು ವಾದಿಸಿದ್ದಾರೆ.

* * * *

ಬಡವರು ಮಾಡಿದರೆ ಕಳ್ಳತನ, ದೊಡ್ಡವರು ಮಾಡಿದರೆ ರಾಜಕಾರಣ ಎಂದು ಸಚಿವರೊಬ್ಬರು ಅಂದರಂತೆ—ತಿರುಪತಿಯಲ್ಲಿ.

—ಇಬ್ಬರೂ ಮಾಡೋದು ಚೌರ ಅಲ್ಲವೇ ? ಹೆಸರೇನಾದರೇನು !

* * * *

"ಆ" ಅನ್ನು ಮಗು ಅಂತ ಡಾಕ್ಟರು ಮಗುವಿಗೆ ಹೇಳುತ್ತಾ, ತಾವೂ ಬಾಯನ್ನು ದೊಡ್ಡದಾಗಿ ತೆರೆದು "ಆ" ಅಂತ ಅಂದಾಗ

ಚೂಟಿ ಮಗು ಅವರ ಬಾಯಿಗೆ ಕೈಲಿದ್ದ ಬಳಪವನ್ನು ತೂರಿ, ಕೇಕೆ ಹಾಕಿ ನಕ್ಕಿತಂತೆ !

* * * *

ಸಾಹುಕಾರರ ಮಗ ವಿಲಾಯ್ತಿಯಿಂದ ಮದುವೆಯಾಗಿ ಹೆಂಡಿರೊಡನೆ ಬಂದಾಗ, ಚೆಂದುಳ್ಳಿ ಹೆಣ್ಣನ್ನು ಕಂಡ ಸಾಹುಕಾರರು, ನಿಮ್ಮ ಅತ್ತೇನ ಯಾಕೋ ಕರ್ಕೊಂಡು ಬರಲಿಲ್ಲಾ ಭಡವಾ ! ಎಂದು ರೇಗಿದರಂತೆ !

* * * *

ಎಂದೂ ಕಾಣದಿದ್ದುದನ್ನು ಇಂದು ಕಂಡೆ, ದೇವಸ್ಥಾನದಲ್ಲಿ, ಎಂದು ಪೂಜಾರಿಗಳು ಹೇಳಿದರಂತೆ.

—ಹೊಸಾ ಮಾದರಿ ರವಿಕೆಗಳನ್ನೂ ನಾವೂ ನೋಡಿದ್ದೇವೆ !

* * * *

ಇದ್ದ ಆಸ್ತಿಪಾಸ್ತಿಗಳನ್ನೆಲ್ಲಾ ತನ್ನ ಲಾಯರಿಗೆ ಬಿಟ್ಟು ಸತ್ತವನು, ಸಾಯುವಾಗ ಹೇಳಿದನಂತೆ, ಸಂತೋಷದಿಂದ.

—"ಬದುಕಿದ್ದಾಗ ನನ್ನನ್ನು ಅವ ತಿಂದ. ಈಗ ಅವನನ್ನು ಸರ್ಕಾರ ತಿನ್ನುತ್ತೆ—ಅನುಭವಿಸಲಿ" ಎಂದು.

* * * *

"ತಾರಾಲೋಕದಿಂದ ಕೇಳಿಸಿದ್ದು"

ಸುಮಾರು ವಯಸ್ಸಿನ ತುಂಬು ಬೆಳೆದಿದ್ದ, ಹೆಂಗುಸೊಬ್ಬಳು ಬೊಂಬಾಯಿನ ತರಕಾರಿ ಮಾರ್ಕೆಟ್ಟಿನಲ್ಲಿ ಬದನೆಕಾಯಿ ವ್ಯಾಪಾರ ಮಾಡುತ್ತಾ ಇದ್ದಾಗ, ಯಾರೋ ಅವಳ ಫೋಟೋ ಹಿಡಿದನಂತೆ. ಹತ್ತಿರಿದ್ದ ಹುಡುಗನೊಬ್ಬ "ಲ್ದತಾ–ಲಲ್ಲತಾ–ಲತಾ ಮಂಗೇಶ್ವರ್" ಅಂತ ತೊದಲುತ್ತಾ ಚೀರಿದನಂತೆ. ಬೆಪ್ಪುಬಡಿದವನಂತೆ ನಿಂತು ನೋಡಿದನಂತೆ.

ಜನ ಸೇರಿತಂತೆ, ಲತಾ ಮಂಗೇಶ್ವರಳನ್ನು ಕಣ್ಣಾರೆ ಕಾಣಲು. ಕತ್ತೆತ್ತಿ, ಉಂಗುಷ್ಟದ ಮೇಲೆ ನಿಂತು ನೋಡಲಾರಂಭಿಸಿದರಂತೆ, ಎಲ್ಲಿ ಎಲ್ಲಿ ಅಂತ ಅನ್ನುತ್ತ.

ಮಾರ್ಕೆಟಿನಲ್ಲಿದ್ದ ತರಕಾರಿ ಗುಡ್ಡೆ ಮೇಲೆಲ್ಲಾ ಜನ ನಿಂತುಬಿಟ್ಟರಂತೆ. ಮಾರ್ಕೆಟಿನ ಮಾರಾಟಗಾರರ ಚೀರಾಟವನ್ನು ಕೇಳಿ ಪೋಲೀಸರು ಬಂದು ದೊಂಬಿ ಅಡಗಿಸಿದರಂತೆ.

ಮಾರ್ಕೆಟ್ ಅಂಚಿನಲ್ಲಿ ಸುಮಾರು ವಯಸಿನ, ತುಂಬು ಬೆಳೆದಿದ್ದ ಹೆಂಗುಸು ಫೋಟೋಗ್ರಾಫರೊಬ್ಬನಿಗೆ ಐದು ರೂಪಾಯಿ ಕೊಟ್ಟಳಂತೆ. "ಫೋಟೋಗ್ರಾಫನ್ನು ಈ ವಿಳಾಸಕ್ಕೆ ಕಳಿಸಪ್ಪಾ" ಎಂದು ಹೇಳುತ್ತಾ.

"ಅದು ಹೇಗಾಗುತ್ತೆ ತಾಯಿ, ಕ್ಯಾಮರಾ ಕ್ಲಿಕ್ ಮಾಡು ಅಂತ ಹುಡುಗ ಹೇಳಿದ, ಅಷ್ಟೇ ನಾನು ಮಾಡಿದ್ದು" ಎಂದನಂತೆ.

ಹುಡುಗ ಅಂಗೈ ಚಾಚಿದನಂತೆ. "ಅಜ್ಜೀ! ಜನಜಂಗುಳಿ ಸೇರಿಸಿದರೆ ಹತ್ತು ರೂಪಾಯಿ ಕೊಡ್ತೀನಿ ಅಂದಿರಿ, ಫೋಟೋಗ್ರಾಫರಸಿಗೆ ಐದು, ನಂಗೆ ಐದು ಅಂತ. ಅದಕ್ಕೇ ನಾನು ಚೀರಿದೆ, ಲತಾಮಂಗೇಶ್ವರ್ ಅಂತ. ಅದಕ್ಕೇ ಜನರೆಲ್ಲಾ ನೋಡುಕ್ಕೆ ಸೇರಿದರು. ಅವನು ಕ್ಲಿಕ್ ಮಾಡಿದ; ನನ್ನ ಬಾಕಿ ಸಲ್ಲಿಸಿ" ಎಂದನಂತೆ.

"ಅವರಿದ್ದಾಗಲೂ ಯಾರೂ ಹೀಗೆ ನನ್ನ ಸುತ್ತ ಸುಳೀಲಿಲ್ಲ — ತೊಗೋಪ್ಪ ಐದು ರೂಪಾಯ್ನ, ಸಂತೋಷವಾಗಿ ಕೊಡ್ತೀನೆ" ಅಂತ ತುಂಬು ವಯಸಿನಾಕೆ ಹಿರಿಹಿಗ್ಗಿ ಕಾಗದದ ಹಣ ಪೀಕಿದಳಂತೆ!

* * * *

ಸವತಿ ಮಾತ್ಸರ್ಯ ಎಂದು ಬರಹಗಾರರು ಬಡಿದುಕೊಳ್ಳುತ್ತಾರೆ, ಛಟ! ಆದರೆ ನಟನಟಿಯರ ಮಾತ್ಸರ್ಯ ಬಲು ತೀಕ್ಷ್ಣತರ ಅಂತ ಅವರಿಗೆ ಗೊತ್ತಿರಲಿಕ್ಕಿಲ್ಲ!

"ಶಾಕುಂತಲಾ" ಪಾರ್ಟು ಹಾಕುತ್ತಾ ಇದ್ದಳು, ನೆನಪಿದೆಯೇ, ನಮ್ಮ ಚರಮುಕೂಡ್ಲು ಮುನ್ನಿ, ಆಳುವ ಅರಸರು ಆರು ಕುದುರೆ ಸಾರೋಟಿನಲ್ಲಿ, ನಾಟಕ ಮುಗಿದ ಮೇಲೆ, ಆಕಡೆ ಬಾಗಿಲ ಹತ್ತಿರ ಕಾದಿರುತ್ತಿದ್ದರು, ಜ್ಞಾಪಕವಿದೆಯೇ?

ಆಕೆ, ಹದಿನೆಂಟರ ಪ್ರಾಯದಲ್ಲಿ ಇಪ್ಪತ್ತೆಂಟೂ ಅನುಭವಗಳನ್ನು ಪಡೆದು ಹಣ್ಣಾದ ಥಳುಕಿನ ಆಕೆ, ಒಂದು ರಾತ್ರಿ ಏನು ಮಾಡಿದಳು ಗೊತ್ತೇ?

"ಸಂಪೂರ್ಣ ರಾಮಾಯಣ ನಾಟಕಗಳನ್ನು ಬೇರೆ ಕಂಪೆನಿಯವರು ಆಡುತ್ತಿದ್ದರು. ಹಳ್ಳಿಯ ಕಂಪೆನಿಯವರು. ಸೀತಾತಾಯಿಯ ಪಾತ್ರವನ್ನು ನೆಲದ್ಹಳ್ಳಿ ರಂಗಿ" ವಹಿಸಿದ್ದಳು. ಹದಿಮೂರರ ಪ್ರಾಯಕ್ಕೇ ಹದಿನೆಂಟರ ಲಕ್ಷಣ ತೋರಿಸಿದ ಸೀತಾತಾಯಿ ಬಲು ಮುದ್ದಾಗಿದ್ದಳು. ತಾಯಿಯಾಗಬಯಸಿ, ಸಂಯಮದಿಂದ ತಾಯಿಯಾಗದೇ, ಸಂಕಲ್ಪಿಸಿದ ನಾಟ್ಯಸಿದ್ಧಿಯನ್ನು ಪಡೆದಿದ್ದಳು.

ಆಳರಸರು ಹೇಳಿ ಕೇಳಿದ ಮಾತನ್ನೂ ನಿರ್ಧರಿಸಲೆಂದೇ ಮುನ್ನಿಯೊಡನೆ, ಛದ್ಮ ವೇಷಧಾರಿಗಳಾಗಿ ಬಂದು, ಎರಡಾಣೆ ತರಗತಿಯಲ್ಲಿ ಕೂತು, ಪಕ್ಕಕ್ಕೆ ಎವೆಯಿಕ್ಕದೆ ರಂಗವನ್ನೇ ನೋಡುತ್ತಿದ್ದರು.

"ಏನು ಪಸಂದಾಗಿ 'ಪಾರ್ಟ್' ಮಾಡುತ್ತಾಳೆ! ಆದರೆ ಅವಳು ಆಡುವ ಮಾತು ಕೇಳಿಸುಲ್ಲವಲ್ಲಾ" ಎಂದು ಮೆಲುದನಿಯಲ್ಲಿ ಹೇಳಿದರಂತೆ.

ಆಗ ಚರಮುಕೂಡ್ಲು ಮುನ್ನಿ ಆಳರಸರ ಕಡೆಗೆ ಕತ್ತನ್ನು ಕೊಂಕಿಸಿ "ಮಹಾಪ್ರಭೋ! ಅದು ಅವಳ ಪುಣ್ಯ, ಅವಳ ಹಳ್ಳಿ ಭಾಷೆಯನ್ನು ಕೇಳಿಸಿದ್ದರೆ, ನಮಗೆಲ್ಲ ವಾಂತಿ ಬರುತ್ತಿತ್ತು, ಆವಾಗಲೇ, ಪಶ್ಚಿಮವಾಹಿನಿಯ ಖಾಸ್ ಬಂಗಲೆಗೆ ಹೊರಟುಹೋಗುತ್ತಿದ್ದೆವು, ನೋಡುಕ್ಕೆ ಒಂದು ಚೆನ್ನ ಆಡುಕ್ಕೆ ಇನ್ನೊಂದು ಚೆನ್ನ" ಎಂದು ತಂತಿ ಮೀಟಿದ ದನಿಯಲ್ಲಿ ಹೇಳಿದಳಂತೆ.

* * * *

ನಾಟ್ಯಶಿರೋಮಣಿ, ಕೀರ್ತಿಶೇಷ, ವರದಾಚಾರ್ಯರು ಒಂದು ಬೆಳಗಿನ ಝಾವ "ವಿಷ್ಣುಲೀಲಾ" ನಾಟಕವಾಡಿ ಮನೆಗೆ ಹಿಂತಿರುಗುತ್ತಿದ್ದಾಗ, ಜತೆಯಿದ್ದ ಮರಿ ನಟನಿಗೆ "ಇದ್ದಿರಬಹುದು ಕಣೋ ಶ್ರೀ ಮಹಾವಿಷ್ಣು ವೈಕುಂಠದಲ್ಲಿ ನನ್ನ ಹಾಗೇ ಪಾರ್ಟ್ ಮಾಡ್ತಾ ಇದ್ದಿರಬಹುದು" ಎಂದು ಹೇಳಿದರಂತೆ.

ಗಾಂಪರ ಗುಂಪು

" ಪ್ರಾಗ್ "

ಅಲ್ಲಾಉದ್ದೀನನು ಮಂತ್ರದ ದೀಪ ಈ ಡೆಮಾಸ್ಕಸ್‌ನಲ್ಲಿ ತಿಕ್ಕಿರಬಹುದೆ? ಆಲಿಬಾಬನು ನಲವತ್ತು ಮಂದಿ ಕಳ್ಳರ ಸಹವಾಸ ಈ ವಿಮಾನ ನಿಲ್ದಾಣದ ಬಳಿಯೇ ಮಾಡಿರಬಹುದೇ ಎಂಬ ಶಂಕೆ ಮೂಡಿದ್ದು ವಿಮಾನ ಇಳಿಯುತ್ತಿದ್ದಂತೇ ಇವರ ಬಳಿ ಇದ್ದ ಪಾಸ್‌ಪೋರ್ಟ್‌ಗಳನ್ನು ತೆಗೆದಿರಿಸಿಕೊಂಡು–ಏರೋಡ್ರೋಮ್ ರೆಸ್ಟೊರೆಂಟಿಗೆ ದಾರಿ ತೋರಿಸಿ ಕರೆದೊಯ್ದಾಗ. ಅಲ್ಲಿ ಸಾಮಾನು ತೂಗಿ ಹೇರುವ ರೂಮು ದಾಟಿದಾಗ ಬೆಂಗಳೂರು ಗೂಡ್ಸ್‌ಷೆಡ್‌ನಲ್ಲಿರುವ ಆಫೀಸು ದಾಟಿದ ಅನುಭವವೇ ಆಯ್ತು. ಅದೇ ನೊಣಗಳು-ಹಾಗೇ ಚೆಲ್ಲಿದ ಎಣ್ಣೆ ಕಲೆ ಅದೇ ಗೋಣೀಚೀಲದ ರಾಶಿ. ಅದೇನು ಸಾಮಾನೋ ಎಲ್ಲಿಗೆ ಹೊಗುತ್ತಿತ್ತೊ.

ಗಾಂಪರೊಡೆಯರು ಶಿಷ್ಯರೊಡನೆ ಠೀವಿಯಿಂದ ನಡೆದು ಹೋದಾಗ ಈ ಸಿರಿಯಾದೇಶದ ಡೆಮಾಸ್ಕಸ್ ಜನ " ಆಲಿ-ದೂಲ್ಯ-ಕಾವುಸೇನ್-ಬಾ ಹೂಸೇನ್ " ಎಂದು ಕೂಗಿ " ಅಲ್ಬಿದಾಯ ಕ್ಯಾ ಹುಸೇನಿ " ಹಾಡು ಹೇಳುತ್ತಿರುವರೋ ಎಂಬಂತೆ ಅವರ ಭಾಷೆಯಲ್ಲಿ ಮಾತಾಡಿಕೊಂಡರು.

ಮಡೆಯನಿಗೆ ಗಾಂಪಮಠದ ಗುರುಪೀಠದ ಪರಾಕನ್ನು ರಾಗವಾಗಿ ಹಾಡ ಬೇಕೆಂಬ ಬಯಕೆಯಾಯಿತು. ಮುಠ್ಠಾಳನಿಗೆ ಹೇಳಿದ. ಹೊಗಳು ಭಟರುಗಳಂತೆ ಇವರೀರ್ವರೂ ಪರಾಕಗಳನ್ನು ಹೇಳುತ್ತಲೇ ರೆಸ್ಟರೆಂಟಿನ ಕಡೆ ಸಾಗಿದ್ದರು.

" ಸಕಳಲೋಕ ಮಂಗೇಶರೊಡೆಯಾ !
ಕಲಹ ಸಂಭೂತ ಕೆಂಬೂತೇಶಾ !
ವೈರಾಗ್ಯ-ವೈರ, ಸಂನ್ಯಾಸ-ವಿನ್ಯಾಸಪ್ರಿಯಾ !
ಪರಮ ಪದ ಸೋಪಾನ ಪಟ ಪ್ರಿಯಕರಾ !
ವಿರಾಟರಾಯ ಕಂಕೇಶ ಪಾದ ಪೂಜಿತಾ !
ವಿಮಾನ ವ್ಯಾನಾ ಮೌನ ಯಾತ್ರಿಕಾ !
ಜಯ ಜಯ ಗಾಂಪರೊಡೆಯಾ-
ಜಯ ಜಯ ಮರುಳ-ಮಡೆಯ-ಮುಠ್ಠಾಳ-ಮಂಕ
ಇತ್ಯಾದಿ ಭಕ್ತವತ್ಸಲಾ–! ಬಹುಪರಾಕ್ "—

—ಎಂದು ತಮ್ಮ ಸ್ವಂತ ಸಾಯಿತ್ಯದಲ್ಲಿ ಅರ್ಥವಿರಲಿ ಇಲ್ಲದಿರಲಿ ಬಹುಪರಾಕ್ ಎಂದು ರೆಸ್ಟರೆಂಟಿಗೆ ವೈಭವದಿಂದ ಹೊಕ್ಕರು. AII ಅತಿಥಿಗಳು ಎಂದು ನಾಲ್ಕಾರು ಮೇಜುಗಳ ಮುಂದೆ ಬರೆದಿದ್ದರು.

"Come on my yulbrenner"–ಎಂದು ಕೂಗಿ ಕರೆದಳು ಆ ಬ್ರೆಸಸ್ಸಿನ ದೊರೆಸಾನಿ. ಗುರುಗಳಿಗೆ ಅಲ್ಲಿಗೇ ಹೋಗಲೇ ಎಂಬ ಆಸೆ. ಆದರೆ ಗುರುಶಿಷ್ಯರಿಗೆಲ್ಲಾ ಆ ಮೇಜಿನಲ್ಲಿ ಜಾಗವಿರಲಿಲ್ಲವಾಗಿ ಪ್ರತ್ಯೇಕ ಮೇಜಿನ ಬಳಿ ಕೂಡ್ರುತ್ತಾ ದೊರೆಸಾನಿಗೆ "Thank you Madam" ಎಂದು ಕಣ್ಣು ಚಿವುಟಿ ಚೇಷ್ಟೆಯ ನಗು ನಕ್ಕು ಕೂತರು. ದೊರೆಸಾನಿಯೂ ಹಾಗೇ ಮಾಡಿದಳು.

ಅಯೋಧ್ಯಾರಾಣಿಯಲ್ಲಿದ್ದಾಗಲೇ ಸಾಕಷ್ಟು ಬ್ರೆಕ್‌ಫಾಸ್ಟ್ ಆಗಿದ್ದಿದ್ದರಿಂದ ಹೆಚ್ಚೇನೂ ಸೇರುವಂತಿರಲಿಲ್ಲ. ಮೇಜಿನ ಮಧ್ಯದಲ್ಲಿದ್ದ ದೊಡ್ಡ ಗಾಜಿನ ಕೂಜಾದಿಂದ ತಣ್ಣನೆಯ ಕಿತ್ತಳೆಹಣ್ಣಿನ ರಸವನ್ನು ಮರುಳ ಎಲ್ಲರ ಲೋಟಾಕ್ಕೂ ತುಂಬಿದ. ಆಗಲೇ ಬಿಸಿ ಶೀರುತ್ತಿತ್ತು.

ಬ್ರೆಡ್ಡು-ಬೆಣ್ಣೆ-ಜಾಂ-ಮೊಟ್ಟೆ-ಪಾರಿಡ್ಜ್-ಕಾರನ್‌ಫ್ಲೇಕ್ಸ್ ಇತ್ಯಾದಿ ಮಾಮೂಲಿ ಬೆಳಗಿನ ಫಳಾರದ ತಿನುಸುಗಳೇ ಮೇಜನ್ನು ಅಲಂಕರಿಸಿದ್ದುವು.

"ಗುರುಗಳೇ ಎಲ್ಲಾ ವಿಲಾಯಿತಿ ತಿಂಡಿಯೇ ಹರಡಿದ್ದಾರೆ-ಡೆಮಾಸ್ಕಸ್ ಮಂದಿ ಏನು ತಿನ್ನುತ್ತಾರೆ-ಸಿರಿಯಾದೇಶದ ಆಹಾರ ವೈಶಿಷ್ಟ್ಯವೇನು ಅನ್ನೋದು ತಿಳಿಸೋಕೆ ಆ ದೇಶದ ತಿಂಡಿಗಳನ್ನೇ ಇಟ್ಟಿದ್ದರೆ ಒಳ್ಳೇದಲ್ಲವೆ?"-ಎಂದು ಮಂಕ ಅಭಿಪ್ರಾಯ ವ್ಯಕ್ತಪಡಿಸಿದ.

"ಹೌದು ಡೆಮಾಸ್ಕಸರು ತಿನ್ನುವ ಕುದುರೆ ಮಾಂಸ-ಬಾರ್ಲಿ ಅನ್ನ ಹುರುಳಿ ಪಲ್ಯ ಬಡಿಸಿದ್ದರೆ ಚೆನ್ನಿತ್ತು"-ಮಡೆಯ ಎಂದ.

"ಹೌದು ಗುರುಗಳೇ ಬೇರೆ ದೂರದವರು ನಮ್ಮೂರಿಗೆ ಬಂದಾಗ ಪಕೋಡ-ಪುಳ್ಳಂಗಾಯಿ ಉಂಡೆ, ಪುಳಿಯೋಗರೆ-ಪುಳಿಯಣ್ಣೋಗೆ-ಪಾಕಂಪಪ್ಪಲು-ಪರಮಾನ್ನ-ಪೂರಿ-ಪಲ್ಯ-ಇತ್ಯಾದಿ ನಮ್ಮ ತಿಂಡಿಗಳನ್ನು ಕೊಟ್ಟರೆ ಅವರಿಗೂ ಗೊತ್ತಾಗತ್ತೆ ನಾವು ಎಂತೆಂಥಾ ಶಿಕ್ಷೆ ಅನುಭವಿಸ್ತಾ ಇದ್ದೀವಿಂತ...."

"ಮರುಳ ಹೇಳಿದ್ದು ಬಹಳ ಸೊಗಸಾದ ಸಲಹೆ-ಆದರಲ್ಲೂ ಅಡಿಗೇನ ಊರಿನ ಅತಿ ಪ್ರಸಿದ್ಧ ನಳಪಾಕ ಪ್ರವೀಣೆ ಗೃಹಣಿಯ ಕೈಯ್ಯಲ್ಲಿ ಮಾಡಿಸಿ ಬಡಿಸಿಸಬೇಕು–ಅಂದರೆ ದೇಶದ ಹೆಣಮಕ್ಕಳ ಪಾಕಶಾಸ್ತ್ರದ ಪರಿಚಯುವೂ ಆದ ಹಾಗೆ ಹಾಗುತ್ತೆ.... ಬರೀ ಈ ಅಡಿಗೆ ಬಂಟರ ಕೈರುಚಿ-ನೋಡಿ ನೋಡಿ ಬೇಜಾರಲ್ವೆ ಗುರುಗಳೇ?"–ಎಂದ ಮಂಕ.

“ಸರಿ ಸರಿ ನಿಮ್ಮ ಮೂಗಿನ ನೇರಕ್ಕೆ-ನಿಮ್ಮ ನಾಲಿಗೆ ರುಚೀಗೆ ಅವರವರ ಬಾಣಸಿಗರು ಬೇಯಿಸಿದ ಬಾನವೇ ಬಹುರುಚಿ ಅನ್ನೋ ಪರಮೋಕ್ತಿಗೇ ಬರ‍್ತಾ ಇದ್ದೀರಿ. ಏಳಿ ಏಳಿ ಹೊರಡುವ”–ಎಂದು ಹಣ್ಣಿನ ರಸದ ಕಡೇ ಗುಟುಕನ್ನು ಹೀರಿ ಎದ್ದರು. ಶಿಷ್ಯರೂ ಎದ್ದರು.

ಹೊರಗೆ ಏನೋ ಜಗಳವಾಗುತ್ತಿತ್ತು. ಸಿರಿಯನ್ ಭಾಷೆಯಲ್ಲಿ ಮುಗಿಲು ಮುಟ್ಟುವಂತೆ ಟ್ಯಾಕ್ಸಿಯವನೊಬ್ಬನನ್ನು ಬಯ್ಯುತ್ತಿದ್ದ. (ನಿಜಕ್ಕೂ ಅದು ಅಚ್ಚ ಸಂಸ್ಕೃತವೇ ಇರಬೇಕು) ಬೈಯ್ಯುತ್ತಿದ್ದವನೂ ಟ್ಯಾಕ್ಸಿಯವ–ಬೈಸಿಕೊಳ್ಳುತ್ತಿದ್ದವನೂ ಟ್ಯಾಕ್ಸಿಯವ. ಇಲ್ಲಿನ ಟ್ಯಾಕ್ಸಿಗಳ ವೈಖರಿ ನೋಡುವಂಥದೆ. ಅಮೆರಿಕಾದಲ್ಲಿ ಮಾಡಿದ ಹೊಚ್ಚ ಹೊಸ 1960ರ ಮಾಡೆಲುಗಳು ಬಿಸಿಲಿಗೆ ಫಳ ಫಳ ಹೊಳೆಯುತ್ತ ಉದ್ದ ಅಗಲಗಳಲ್ಲಿ ಲಾರಿಯ ಅಳತೆಗೇ ಸಮೀಪದ್ದ ಈ ಚಿತ್ರವಿಚಿತ್ರ ಟ್ಯಾಕ್ಸಿಗಳ ವೈಭವ ನೋಡಿ ಡಂಗಾಗಿ ನಿಂತಿದ್ದರು ಗುರುಶಿಷ್ಯರು.

ಆ ಜಗಳವೂ ನಮ್ಮೂರಿನ ಬಾಬತ್ತಿನದೇ ಆಗಿತ್ತೆಂದು ತಿಳಿದಾಗ ಮರಳನಿಗೆ ಬಹು ಸಮಾಧಾನವಾಯಿತು. ಒಬ್ಬ ಟ್ಯಾಕ್ಸಿಯವ ಮುಂದೆ ನಿಲ್ಲಿಸಿದ್ದನಂತೆ–ಅವನ ಸರ್ತಿ ಪ್ರಕಾರ ಹಿಂದೆ ನಿಲ್ಲಬೇಕಿತ್ತಂತೆ. ಹಿಂದಿದ್ದವ ಮುಂದೇಕೆ ಬಂದಾ ಎಂದು ಕ್ಯೂನಲ್ಲಿದ್ದವ ತರಾಟೆಗೆ ತೊಗೊಂಡ. ಕೈ ಕೈ ಮಿಲಾಯಿಸಿ ಸೊಗಸಾದ ಭೀಮ-ಬಕಾಸುರ ಕಾಳಗದ ಪ್ರತ್ಯಕ್ಷ ನೋಡುತ್ತೇನೆಂದು ತಿಳಿದದ್ದು ಗಾಂಪರ ಗುಂಪಿನ ತಪ್ಪು. ಬರೀ ಮಾತಿನ ಬಾಣಗಳನ್ನೇ ಪ್ರಯೋಗಿಸಿದರು-ಎದ್ದರೆ ಆಳಲ್ಲವೆಂಬ ನಮ್ಮೂರ ಟ್ಯಾಕ್ಸಿಯವರು ಹಾಗೇ ಇತ್ತು ಇವರ ವರ್ತನೆ.

“ಗುರುಗಳೇ ಈ ಊರ ಟ್ಯಾಕ್ಸಿಯವರೂ ನಮ್ಮೂರ ಟ್ಯಾಕ್ಸಿ ಫಕೀರಸ್ವಾಮಿಗಳ ಹಾಗೇ ಆಡ್ತಾರೆ....”–ಮಡೆಯ.

“ಭೂಮಿ ಗುಂಡಾಗಿದೆ ಅನ್ನೋದಕ್ಕೆ ಇದೂ ಒಂದು ನಿದರ್ಶನ....”–ಎಂದು ಬಿಟ್ಟರು. ಮಡೆಯ ಈ ಗುರುವಾಕ್ಯಕ್ಕೆ ಮಂಡೆ ಕೆರೆದುಕೊಂಡ.

“ಹಾಗೇ ಊರೊಳಗೆ ಆಡ್ತಾಡಿ ಬರಬಹುದೇ ?” ಎಂದು ವಿಚಾರಿಸಿದ ಮರಳ. ಆ ದೇಶದ ಕಡೆ ಊರೊಳಗೆ ಹೋದರೆ ಹಿಂದಿರುಗಿ ಬರೋಕೆ ಒಲ್ಲರು. ಇದೂ ಬಂಗಾರದ ದೇಶ ಈ ಊರ ಸುತ್ತ ಮುತ್ತ ನೆಲ ಅಗಿದರೆ ನೀರು ಬರೋಲ್ಲ-ಎಣ್ಣೆ ಎಣ್ಣೆ ಬರುತ್ತೆ–ಶೀಮೆಎಣ್ಣೆ ಶೀಮೆ ಸ್ವಾಮೀ ಇದೂ”–ಎಂದ. ಬದಿಯಲ್ಲಿದ್ದ ಆಂಗ್ರೇಜಿಯವ.

“ಹಾಗಾದ್ರೆ ಗುರುಗಳೇ, ಇಲ್ಲೀ ಭಾವಿಗಳಲ್ಲಿ ಬರೀ ಎಣ್ಣೆ ಆದರೇ ನೀರಿಗೇನು ಮಾಡ್ತಾರೆ ಮಂದಿ ?”—ಮುಠ್ಠಾಳ.

" ನಾವು ನೀರು ಬಳಸೋ ಹಾಗೆ ಎಣ್ಣೆ ಬಳಸ್ತಾರೆ .. ಅಷ್ಟೂ ತಿಳಿಯಲ್ಲ ಈ ಮುಠ್ಠಾಳನಿಗೆ. ಒಳ್ಳೆ ಹರಳೆಣ್ಣೆ ಕುಡಿದವರು ಕೇಳೋ ಪ್ರಶ್ನೆಗಳೇ ಇವನದು "— ಎಂದು ಗದುರಿದ ಮಂಕ.

—ಅದೇ ಅಂಗ್ರೇಜಿಯುವ ಮತ್ತೆ ಹೇಳಿದ. " ಅಮೆರಿಕನರಿಗೆ ಈ ಎಣ್ಣೆ ಬಲು ರುಚಿ ಹತ್ತಿಬಿಟ್ಟಿದೆ. ಒಂದು ಡಾಲರು ಖರ್ಚುಮಾಡಿ ನೂರು ಡಾಲರು ಸಂಪಾದಿಸ್ತಾರೆ. ಬಂಗಾರಾಂದ್ರೆ ಅಂಗಾರ ಆಗ್ಹೋಗಿದೆ ಇಲ್ಲಿ ಕೆಲವು ಸಾವುಕಾರ್ರಿಗೆ" ಮಂಕನಿಗೆ ಈ ಅಂಗ್ರೇಜಿಯುವ ಕಮ್ಯೂನಿಸ್ಟನಿರಬೇಕೆಂದು ಸಂದೇಹ ಬಂತು.

" ನೀವೆಲ್ಲಿಗೆ ಇಳಿಯುವವರು ?"—ಎಂದು ಕೇಳಿದ.

" ಮುಂದಿನ ಊರು—ಪ್ರಾಗ್‌ಗೆ ಹೊರಟಿದ್ದೇನೆ "

" ಇಂಡಿಯಾಕ್ಕೆ ಬಂದದ್ದು ? "

" ಜೆಕೊಸ್ಲೊವೇಕಿಯಾದ ಕಾಗದಾ ಮಾಡೋ ಯಂತ್ರ ತಯಾರಿಸೋ ಕಾರ್ಖಾನೆಯಲ್ಲಿ ನಾನು ಇಂಜಿನಿಯರು. ಮಲೆಯಕ್ಕೆ ಮಾರಿದ ಒಂದು ಕಾಗದದ ತಯಾರಿಕೆ ಯಂತ್ರ ಸರಿಯಾಗಿ ಕೆಲಸ ಮಾಡಿಸಲು ಹೋಗಿದ್ದೆ—ವಾಪಸು ಊರಿಗೆ ಹೊರಟಿದ್ದೇನೆ" ಎಂದು ಹೇಳಿದ ಆ ಕೆಂಪುಮುಸುಡಿಯಾತ. ಇವನ ಮಾತು ಕೇಳಿ ಮಡಿಯ ನಡುಗಿದ. ಮೊದಲಿಂದಲೂ ಕಮ್ಯೂನಿಸ್ಟರೆಂದರೆ ಮಡಿಯನಿಗೆ ಭಯ. ಅವರುಗಳು ರಾಕ್ಷಸರೇ ಇರಬೇಕೆಂದು ಭ್ರಮಿಸಿದ್ದ ಈ ಭಡವ, ಮಡಿಯ. ಅವನ ಹತ್ತಿರ ನಿಲ್ಲದೆಯೇ ಗುರುಗಳ ಹಿಂದೆ ಹೋಗಿ ಅಡಗಿಕೊಂಡ.

" ಪ್ರಾಗ್ ಕಮ್ಯೂನಿಸ್ಟ್ ಆಡಳಿತದಲ್ಲಿ ಹೇಗಿದೆ ?"—ಎಂದ ಮಂಕ ತನ್ನ ಸಂದೇಹ ನಿಜವಾದದ್ದು ಇವನಿಗೇ ಸಂತೋಷವಾಗಿತ್ತು.

" ಎಲ್ಲರೂ ದುಡೀಬೇಕು. ಎಲ್ಲರೂ ಸಮನಾಗಿ ತಿನ್ನಬೇಕು. ಎಲ್ಲರೂ ದುಡಿದು ಕೆಲವೇ ಜನರಿಗೆ ಕಾರು ಕೊಂಡು ಕೊಡುವ ಮೂರ್ಖರಿಂದ ಪಾರಾಗಿ ಹಾಯಾಗಿದ್ದೇವೆ" ಎಂದ ಆ ಕೆಂಪಯ್ಯ. ಅವನ ಕೆಂಪು ಕಮ್ಯೂನಿಸ್ಟರ ರಕ್ತವರ್ಣ ದಂತೆಯೇ ಕಂಡಿತು. ಗುರುಗಳಾದರೋ ಎಲ್ಲ ಇಸಂಗಳಿಂದ ದೂರವಾಗಿ ಕೇವಲ " ಉದುರಿಸಂ " (ಅಂದರೆ ಗಾಂಪರೊಡೆಯರ ಹೊಸ ಪದಪ್ರಯೋಗ ಉದರನಿಮಿತ್ತಂ ಅನ್ನುವುದರ ತತ್ಸಮ) ಆರಾಧಕರಾಗಿದ್ದಾರೆ. ಮಠ—ಜಹಗೀರು—ನಾಲೆ ಕೆಳಗಿನ ಸಾವಿರಾರು ಎಕರೆ—ಅರಮನೆಗಳನ್ನು ಕಿತ್ತುಕೊಂಡು, ಅರಮನೆಯನ್ನು ಜನಮನೆ ಯನ್ನಾಗಿ ಮಾಡಿದ ಈ ಕಮ್ಯೂನಿಸ್ಟರು ತಮ್ಮ ಮಠವನ್ನೂ ವಶಪಡಿಸಿಕೊಳ್ಳು ವರೋ ! ವ್ಯಕ್ತಿಸ್ವಾತಂತ್ರ್ಯಕ್ಕೆ ಧಕ್ಕೆ ಬಂದೀತೋ ! ದೇವರು ದಿಂಡರು—ಗುಡಿ ಗೋಪುರಗಳಿಗೆ ಬೆಂಕಿ ಇಕ್ಕಿಯಾರೋ ಈ ಕೆಂಪುಜನ ಎಂದೂ ಯೋಚಿಸಿದರು. ಕೇರಳಕ್ಕೆ ಹತ್ತಿದ ಗೆದ್ದಲು ಮಿಕ್ಕ ಊರಿಗೆ ಬಿಟ್ಟೀತೆ ? ಎಂದೆಲ್ಲಾ ಚಿಂತಿಸಿದರು.

'ಸರ್ವೇ ಜನಾಃ ಸುಖಿನೋ ಭವಂತು' ಅನ್ನೊ ಆಯೋಕ್ತಿ ಪ್ರಪಂಚಕ್ಕೇ ಹಂಚ್ತಾ ಇದ್ದೀವಲ್ಲಾ ಅನ್ನೊ ಠೀವಿಯಿಂದ ಆ ಕಮ್ಯೂನಿಸ್ಟ ತನ್ನ ಪಾಸ್ ಪೋರ್ಟನ್ನು ಜೋಡಿಸಿ ತಂದ ಪಾಸ್‌ಪೋರ್ಟಗಳಲ್ಲಿ ಆರಿಸಿಕೊಂಡ. ಮಂಕ ಮಡಿಯ ಗುರುಗಳೂ ತಂತಮ್ಮ ಗುರ್ತಿನ ಚೀಟಿ ಆರಿಸಿಕೊಂಡರು. ಏರ್ ಇಂಡಿಯಾ ಇಂಟರ್ ನ್ಯಾಷನಲ್ ಸಂಸ್ಥೆಯ ನೌಕರನೊಬ್ಬ ಎಲ್ಲರನ್ನೂ ವಿಮಾನಕ್ಕೆ ಮತ್ತೆ ಹತ್ತುವಂತೆ ಪ್ರಾರ್ಥಿಸಿದ.

ರಾತ್ರಿಯೆಲ್ಲಾ ನಿದ್ದೆಗೆಟ್ಟು ವಿಮಾನ ಓಡಿಸಿದ ಪೈಲೆಟ್, ಕೊ-ಪೈಲೆಟ್, ಗಗನ ಸಖಿಯರಿಗೆ ಇಲ್ಲಿಗೇ ರಜ. ಇಲ್ಲಿಂದ ಮುಂದೆ ಲಂಡನ್ನಿನ ತನಕ ಬೇರೆ ಪೈಲೆಟ್, ಕೊ-ಪೈಲೆಟ್, ಗಗನಸಖಿಯರಿರುತ್ತಾರೆ.

ಗಾಂಪರೊಡೆಯರು ತಮ್ಮ ಗುಂಪಿನೊಡನೆ ಮತ್ತೆ ಅಯೋಧ್ಯಾರಾಣಿಗೇ ಹತ್ತಿದರು. ಹಿಂದಿನ ರಾತ್ರಿಯ ಅರೆನಿದ್ರೆ—ಕೆಲವೊಮ್ಮೆ ಆದ ವಿಚಿತ್ರ ಅನುಭವ ಗಳನ್ನು ನೆನೆದರೆ ಈ ಅಯೋಧ್ಯಾರಾಣಿಯನ್ನು ನಂಬಿದರೆ ವನವಾಸವೇ ಗತಿ ಎಂದು ಕೊಂಡು ಹತ್ತಿದರು. ಮೇಲಿನ ಮೆಟ್ಟಲು ಹತ್ತಿ ಹಿಂದಿರುಗಿದಾಗ, ಮಡೆಯನ ಹಿಂದೆಯೇ ಆ ಧಡಿಯ ಕಮ್ಯೂನಿಸ್ಟ ನಿಂತಿದ್ದ.

ಪ್ರಾಗ್ ಸೇರುವ ತನಕ ಆ ಊರಿನ ವಿಚಾರವನ್ನಾದರೂ ಈ ಕಮ್ಯೂನಿಸ್ಟನ ಮೂಲಕ ತಿಳಿಯಬೇಕೆಂದು ಮಂಕ ಇವನನ್ನು ನೋಡಿ ನಕ್ಕ. ಆದರೆ ಆತ ನಗಲಿಲ್ಲ. ಬೆವರಿದ ಚಿಕ್ಕ ಕ್ರಾಪಿನ ತಲೆಯ ಮೇಲೆ ಕೆಂಪು ಹ್ಯಾಟನ್ನು ಹಾಕಿಕೊಂಡ.

ಎಲ್ಲರೂ ಮತ್ತೆ ಅಯೋಧ್ಯಾರಾಣಿಯ ಹೊಟ್ಟೆಯನ್ನು ಹೊಕ್ಕರು. ತಂತಮ್ಮ ಜಾಗದಲ್ಲಿ ಕೂತರು. ದೊರೆಸಾನಿ ಈ ಬಾರಿ ಗಾಗಲ್ಸ್ ಹಾಕಿದ್ದರಿಂದ ಗುರುಗಳನ್ನು ನೋಡಿದರೂ ಅವರಿಗೆ ಗೊತ್ತಾಗುತ್ತಿರಲಿಲ್ಲ. ಹೊಸ ಏರ್ ಹೊಸ್ಟೆಸ್ ಮಿರಾಂಡಾ ಳಿಗಿಂತ ಕೊಂಚ ಧಡೂತಿಯಾಗಿದ್ದಳು—ಇನ್ನೂ ಬೃಹನ್ ಮೈಕಟ್ಟು. ಬಾಗಿಲಲಿ ಕೈಮುಗಿದು ಯಾತ್ರಿಕರನು ಒಳಗೆ ಕರೆದಳು ಆ ಕೆಂಪುತುಟಿಯ—ಬಿಳಿ ಮೊಗದ— ಗುಲಾಬಿ ಗಲ್ಲದ—ಚೂಪು ಎದೆಯ ಮಾಟಗಾತಿ ಗಗನಸಖಿ ಬೆಟ್ಟಿ. (Betty)

ಡೆಮಾಸ್ಕಸ್ಸಿನ ಅರಬರಿಬ್ಬರು ಹೊಸದಾಗಿ ಹತ್ತಿದ್ದರು. ಎಲ್ಲರೂ ಕೂತಮೇಲೆ ಮಾಮೂಲಿಯ AII ಸ್ವಾಗತ, ಹೊಸ ಏರ್‌ಹೊಸ್ಟೆಸ್, ಪೈಲೆಟ್-ಇತ್ಯಾದಿ ಚಾಲಕರ ಪರಿಚಯ ಆಗುತ್ತಿದ್ದಂತೇ Fasten your belts ಆಗಿ ಕೆಲವೇ ನಿಮಿಷಗಳಲ್ಲಿ ಪ್ರಾಗ್ ನಗರದ ಕಡೆ ತಿರುಗಿ ಗಗನದಲ್ಲಿ ತೇಲಿಹೋಗುತ್ತಿತ್ತು "ಅಯೋಧ್ಯಾರಾಣಿ".

ದೊರೆಸಾನಿ ಮಾಮೂಲಾಗಿ ಪಕ್ಕದಲ್ಲಿದ್ದಳು. ಈ ಬಾರಿ ಗುರುಗಳು ಒಂದು ಧರ್ಮಸೂಕ್ಷ್ಮದ ಮೊರೆಹೊಕ್ಕು ಆ ದೊರೆಸಾನಿಯ ಕಾಟಕ್ಕೆ ಒಂದು ಹೊಸ ವ್ಯಾಖ್ಯಾನ ಕೊಟ್ಟರು.

"ಕತ್ತಲಲ್ಲಿ ನಡೆವಾಗ ಕಾಲಿಗೆ ಸಿಕ್ಕು ಇರುವೆಗಳು ಸತ್ತರೆ ಪಾಪವಲ್ಲ. ಕಾಣದೆ ಮಾಡಿದ ತಪ್ಪುಗಳಿಗೆ ದೇವರು ಸದಾ ಕ್ಷಮೆ ಕೊಡುತ್ತಾನೆ. ಕುರುಡರು ಮಾಡಿದ ತಪ್ಪಿಗೆ ಯಾವ ಶಿಕ್ಷೆ ಅನುಭವಿಸಬೇಕು? ಆದ್ದರಿಂದ ತಮ್ಮ ಸೋಡಾ ಬಾಟಲ್ ಕನ್ನಡಕ ತೆಗೆದುಬಿಟ್ಟರು. ಆಗ ಅವರಿಗೇನೂ ಕಾಣುತ್ತಿರಲಿಲ್ಲ. ಆದ್ದರಿಂದ ಕಾಣದೆ ಮಾಡಿದ ತಪ್ಪಿಗೆ ಕ್ಷಮೆ"—ಎಂಬ ಧರ್ಮಸೂಕ್ಷ್ಮ ನಮ್ಮದು ಎಂದು ಕನ್ನಡಕ ತೆಗೆದರು. ದೊರೆಸಾನಿ "you look better now" ಅಂದಳು. ಈಗ ಆಕೆ ತಲೆ ನೇವರಿಸಿದರೂ ದೋಷವಿಲ್ಲ. ಏಕೆಂದರೆ ಗುರುಗಳು ಕನ್ನಡಕ ತೆಗೆದಿದ್ದರು! ಕಾಣದೆ ಮಾಡಿದ ತಪ್ಪು ಅದಲ್ಲವೇ?

ಮಾತಾಡುತ್ತಿದ್ದಂತೇ ವಿಮಾನ ಮೋಡಗಳ ನಡುವೆ ಮನೋಹರವಾಗಿ ತೇಲಿಕೊಂಡು ಹೋಯಿತು. ದೂರದಲ್ಲಿ ಹಸಿರು ಗುಡ್ಡ—ನೀಲಿ ನೀರು—ಬೆಟ್ಟ ತಟ್ಟೆಗಳಲ್ಲಿ ಬಿಸಿಬಿಸಿಯಾದ ಊಟ ತಂದಳು. ಊಟಕ್ಕೆ ಮುಂಚೆ ಬೀರ್ ಸೇವನೆ ಆಯಿತು. ಚಿತ್ರಾನ್ನ, ಮಾವಿನಕಾಯಿ ಉಪ್ಪಿನ ಕಾಯಿ, ಹುಳಿ, ಮೊಸರು, ಹಪ್ಪಳ ಇತ್ತು. ಬಿಸಿಬಿಸಿಯಾಗಿ ಹೊಡೆದರು. ಅಡಿಕೆ ಜಗಿದರು. ಹಾಗೇ ಮಧ್ಯಾಹ್ನದ ಮಂಪರಲ್ಲಿ ಕಣ್ಣುಮುಚ್ಚಿದರು. ಬಲವಾಗಿ ಗೊರಕೆ ಬಂತು.

ಎಚ್ಚರವಾದಾಗ ಪ್ರಾಗ್ ನಗರದ ನಿಲ್ದಾಣದಲ್ಲಿ ಇಳಿಯುತ್ತಿತ್ತು ವಿಮಾನ. ಕಮ್ಯೂನಿಸ್ಟರ ಅದ್ಭುತ ಊರಿನಲ್ಲಿ ಬೆದರು ಬೊಂಬೆಗಳಂತೆ ಇಳಿದರು ಗಾಂಪರೊಡೆಯರು ಮತ್ತು ಶಿಷ್ಯರು.

—ದಾಶರಥಿ ದೀಕ್ಷಿತ್



ಅವನೇ! ಭಾಷಣಕಾರನಿಗೆ ಬಿಗಿದೋನು!!

ಪಿಡುಗುಗಳು

" ಮಾಡಿದ್ದುಣ್ಣೋ ಮಹರಾಯಾ "

" ಅದೇನೋ? 'ಮಾಡಿದ್ದುಣ್ಣೋ ಮಹರಾಯಾ' ಅಂತ ನಿಟ್ಟುಸಿರು ಬಿಡ್ತೀಯಾ ಹಾಗೆ ಉದ್ದಕ್ಕೆ ..."

" ಕುದುರೆ ವ್ಯಾಧಿ ಕಣೋ "

" ಯಾರಿಗೆ? ನಿನಗೋ ಕುದುರೆ ವ್ಯಾಧಿ? "

" ಅಯ್ಯೋ ಮಂಕೆ! ನನಗ್ಯಾತಕ್ಕೆ ಬರುತ್ತೆ ಕುದುರೆ ವ್ಯಾಧಿ? ಲಂಗು ಲಗಾಮಿಲ್ಲದೆ ಅಲೆಯೋ ನಿನ್ನಂಥ ಕುದುರೆಗಳಿಗೂ ಕೂಡ ಬರೊಲ್ಲ ಅದು. ಪಾಪ! ಜಟಕಾ ಕುದುರೆ, ರೇಸ್ ಕುದುರೆಗಳಿಗೆ ಏನೋ ವ್ಯಾಧಿ ತಗುಲಿದೆಯಂತೆ .."

" ಓಹೋ ಹಾಗೇನು? ನೀನು ಬಾಲಾ ಹಿಡಿದ ಕುದುರೆಗೇನಾದರೂ...."

" ಹಾಗೇನಿಲ್ಲ...."

" ಮತ್ತೆ ಮಾಡಿದ್ದುಣ್ಣೋ ಎಂದು ಗೋಗರೆದೆಯಲ್ಲ....ಆದದ್ದೇನು ? "

" ಆದದ್ದೇನಿಲ್ಲ ...ಆ ಕುದುರೆ ವ್ಯಾಧಿ ಹಾಳಾದ್ದು ದಕ್ಷಿಣ ಆಫ್ರಿಕದ್ದಂತೆ. ನಮ್ಮ ಮೆನನಾದಿಗಳೆಲ್ಲ ಆ ದೇಶಕ್ಕೆ ಛೀಮಾರಿ ಹಾಕಿ ಹಾಕಿ, ಅಲ್ಲಿನ ಬಿಳಿ ಧೊರೆಗಳಿಗೆ ರೋಸಿಹೋಗಿ, ಹೀಗೆ ಈ ವ್ಯಾಧೀನ ಛೂ ಬಿಟ್ಟಿದಾರಂತ ಕಾಣುತ್ತೆ, ಪ್ರತೀಕಾರಕ್ಕಾಗಿ. ಈಗ ಅನುಭವಿಸಿದರೆ ಸರಿ. "

" ಸೀಸನ್ ಸೀಸನ್ನಿಗೂ ತಿಪಟೂರು ಕಡೇಲಿರೋ ಒಂದೊಂದೇ ತೆಂಗಿನ ತೋಟಾನ ಮಾರಿಕೊಂಡೆಯಲ್ಲ ಪುಟ್ಟಯ್ಯ........ಈ ವ್ಯಾಧಿ ಮೊದಲೇನೆ ಬಂದಿದ್ದರೆ? "

" ಛೀ ಛೀ ! ಕೇಳಲಾರೆ! ಶಾಂತಂ ಪಾಪಂ, ಶಾಂತಂ ಪಾಪಂ. ಬಾಯಿ ಮುಚ್ಕೋ ಭಡವಾ...."

" ಅಂದಹಾಗೆ ಈ ಮಿಡತೆಗಳ ಹಿಂಡನ್ನ ನಮ್ಮ ದೇಶದ್ಮೇಲೆ ಯಾರು ಛೂ ಬಿಟ್ಟರು ಹೇಳು ? "

" ಅಷ್ಟು ತಿಳಿಯೋದಿಲ್ಲವೆ ? ಅವೆಲ್ಲ ಅಯೂಬಖಾನರದಲ್ಲವೆ ? ಈಗ ಮಿಡಿತೆ ಹಿಂಡು. ಹಾಗೆ ಬೇಕಿದ್ದರೆ ಕಾಶ್ಮೀರ ಕಸುಕೊಳ್ಳೋಕೆ ಪಠಾಣರ ಹಿಂಡಿಗೂ ಏನು ಕಡಿಮೆಯಿಲ್ಲ ಮಿಡತೆ ಹಿಂಡು ಹಸುರು-ಪಸರು ಮುಕ್ಕಿ, ಮುನ್ನಡೆದರೆ ಪುಂಡರ ಹಿಂಡು ಕಂಡಿದ್ದನ್ನೆಲ್ಲ ಧ್ವಂಸ ಮಾಡ್ತಾವೆ ಅಷ್ಟೆ "

" ಹಾಗಿರಲಾರದು ಕಣೋ ...ಮೊನ್ನೆ ಮೊನ್ನೆ ಸೌಹಾರ್ದದ ಗುರುತಾಗಿ ಕಾಲುವೆ ನೀರಿನ ಒಪ್ಪಂದವಾಗಲಿಲ್ಲವೆ ? ನೆಹರು ಅಯೂಬ್ ಭೇಟಿಯಾಗಲಿಲ್ಲವೆ ?"

" ಸರಿ ಸರಿ ... ಹಾಗಿದ್ದರೆ ಶಾಂತಿ ಸಂಕೇತಗಳಾದ ಪಾರಿವಾಳಗಳನ್ನು ಕಳಿಸೋ ಬದಲಿಗೆ ಅವು ಸಿಗದ್ದರಿಂದ ಮಿಡಿತೆ ಹಿಂಡುಗಳ ಕಳಿಸಿದಾನೆ ಅಯೂಬ್‌ಖಾನ್ ಅಂತಿಟ್ಟುಕೋ ದೊರೆ ! "

" ಇರಲಿ ಬಿಡು....ಕುದುರೆ ವ್ಯಾಧಿ ದಕ್ಷಿಣಾಫ್ರಿಕದ್ದು ಅಂತೀಯ....ಮಿಡತೆ ಹಿಂಡು ಕರಾಚೀದು ಅಂತೀಯ. ಅಂದಮೇಲೆ ಮಾವೋ ಏನಾದರೂ ಚೀನಾ ದಿಂದ...."

" ಅದೋ .. ಮಾವೋ ಯಾವ ಪಿಡುಗನ್ನೂ ಛೂ ಬಿಡುವ ಪ್ರಶ್ನೆಯೇ ಯಿಲ್ಲ. ನಮ್ಮಲ್ಲಿರೊ ಪಿಡುಗುಗಳಿಗೇನೇ ಕೊಂಚ ಗಾಳಿ ಹಾಕಿದರೆ ಸರಿ."

" ಅಂದರೆ ? ...ಅರ್ಥವಾಗೋದಿಲ್ಲವಯ್ಯ "

" ಅರ್ಥವಾಗುತ್ತೆ ಅಲ್ಲಿ ನೋಡು. ಬಿಗಿದ ಮುಷ್ಟಿ....ಏನೋ [illegible]ವಾಗಲಿ ಅಂತಿದಾರೆ....ಹಿಂದೀ ಚೀನಿ ಭಾಯಿ ಭಾಯಿ ...[illegible]ರಲ್ಲಿ ಕೂಡ ! ಅರ್ಥವಾಯಿತೆ ಈಗ ? "

" ಏನರ್ಥವಾಗೋದೋ ...ನೀನೇ ಒಂದು ಪಿಡುಗು ಪುಟ್ಟಯ್ಯ........ತಲೆ ಸಿಡಿತಾ ಇದೆ ನಿನ್ನ ಮಾತು ಕೇಳಿ....ಹೋಗ್ತೀನಪ್ಪಾ. ಮನೆಗೆ ಹೋಗ್ತೀನಿ "

—ರಾವಿ

' ನಾವೆಂಬರೊಂದೇ ! '

ನನಗೆ ಆಶ್ಚರ್ಯವಾಯಿತು. ಹಾಗೇ ನೋಡುತ್ತಲೆ ನಿಂತುಕೊಂಡೆ. ಇಂತಹ ಮುಖ್ಯ ಬೀದಿಯ ಮಧ್ಯದಲ್ಲಿ, ಇಷ್ಟೊಂದು ಬೆಳಿಗ್ಗೆ ಬಂದು ತಗ್ಗನ್ನು ತೋಡುತ್ತಿರುವನಲ್ಲ? ಯಾವನಾದರೂ ಹುಚ್ಚನಿರಬಹುದೇ? ಸ್ವಾತಂತ್ರ್ಯ ಪ್ರಾಪ್ತಿಯ ನಂತರ ಹೇಗಾದರೂ ಪ್ರಸಿದ್ಧನಾಗಬೇಕು ಎನ್ನುವ ಹುಚ್ಚರ ಸಂಖ್ಯೆ ಬೆಳೆಯುತ್ತಿದೆ! ಅಂತಹ ಹುಚ್ಚನಾಗಿದ್ದರೆ—? ಉಹುಂ, ಅಂತಹ ಹುಚ್ಚಿನ ಯುನಿಫಾರ್ಮ (ಸಮವಸ್ತ್ರ) ತೊಟ್ಟಿಲ್ಲ? ಮೇಲೆ ಏನನ್ನೊ ವಟಗುಟ್ಟುತ್ತಿದ್ದಾನೆ! ಕುತೂಹಲ ತಡೆಯದಾಗಿ ನಾನು ಹತ್ತಿ ಹೋದೆ. ಇದೇನು? ಮಂತ್ರ? ಇನ್ನಿಷ್ಟು ಹತ್ತಿರ ಹೋದೆ. ಹಹ! ಎಂತಹ ಮಂತ್ರವಿದು? ಅವನು ವಟಗುಟ್ಟುತ್ತಿದ್ದುದೇನು ಗೊತ್ತಿದೆಯೇ? ಊಹಿಸಿ? ಶಕ್ಯವಿಲ್ಲವೇ? ಕೇಳಿ, ಅವನು ವಟಗುಟ್ಟುತ್ತಿದ್ದ ಈ ಮಂತ್ರವನ್ನು!

' ಮುಂಬೈ, ಮದ್ರಾಸು, ಮೈಸೂರಾನ್, ನೈಜಾಮಂ, ಕೊಡಗಂ ತಥಾ! ಪಂಚಕರ್ನಾಟಕಂ ನಿತ್ಯಂ ಸ್ಮರೇತ್ಸರ್ವಾರ್ಥಸಿದ್ಧಯೇ '

" ಏನಯ್ಯಾ ಇದು ? " ಎಂದೆ.

" ನಾಳೆಗಾಗಿ ತಪಸ್ಸಿನ ಸಿದ್ಧತೆ " ಎಂದ.

" ನಾಳೆ ? ಏನಿದೆ ನಾಳೆ ? "

" ನಾವೆಂಬರೊಂದೇ ದಿನ."

ಇದೊಂದು ಹುಚ್ಚು ನಮ್ಮ ಕನ್ನಡ ಜನಕ್ಕೆ! ತಮ್ಮದಾದ ಭಾಷೆಯನ್ನು ಕಲಿಯುವಂತಿಲ್ಲ, ಕಲಿತರೂ ಬಾರದ ಅನ್ಯಭಾಷೆಯನ್ನು ಬಿಡುವಂತಿಲ್ಲ! ನಾವೆಂಬರೊಂದಂತೆ! ನೊವೆಂಬರ್-ತಿಂಗಳಿನ ಇಂಗ್ಲಿಶ್ ಹೆಸರನ್ನು ಹೇಳಬೇಕೆಂಬ ಹಟ ಯಾಕೊ?

" ನೊವೆಂಬರ ಒಂದು ಈ ಹೊತ್ತು " ಎಂದೆ.

" ಅದು ನನಗೆ ಗೊತ್ತು "

" ಮತ್ತೆ ? ನಾಳೆ ನೋವೆಂಬರ್ "

" ನೊವೆಂಬರ್ ಅಲ್ಲ, ನಾವೆಂಬರ " ಎಂದ.

" ಇದು ಯಾವ ತಿಂಗಳು ? "

" ತಿಂಗಳ ಮಾತಲ್ಲ ಇದು, ಸಾರ್. ಯುಗ ಯುಗಗಳ ಮಾತಾಗಿದೆ ಇದು. ಅದಕ್ಕಾಗಿಯೇ ತಪಸ್ಸು ಮಾಡಬೇಕಾಗಿದೆ" ಎಂದ.

ಸುತ್ತಲೂ ನೋಡಿದೆ. ಪೋಲೀಸು ಯಾವನೂ ಇಲ್ಲ, ಬೀದಿಯಲ್ಲಿ ಇನ್ನೂ ಜನರ ಸದ್ದೂ ಇಲ್ಲ. ಒಬ್ಬನೇ ಈ ಹುಚ್ಚನ ಕೈಯಲ್ಲಿ ಸಿಕ್ಕುಬಿಟ್ಟರೆ?

ಇಷ್ಟರಲ್ಲಿ ಅವನು ತಗ್ಗು ಅಗಿಯುವುದನ್ನು ಮುಗಿಸಿ, ಕುಳಿಯಲ್ಲಿಯೆ ಮುಖವನ್ನೆತ್ತಿ ನನ್ನನ್ನು ನೋಡುತ್ತ,

" ತಪಸ್ಸನ್ನೆ ಮಾಡಬೇಕಾಗಿದೆ" ಎಂದ.

ಒಳ್ಳೆಯ ಮಾತಿನಿಂದಲೆ ಬೇಗ ಪಾರಾಗುವುದೊಳಿತೆಂದು ನಾನೂ ಸುಳ್ಳು ನಗೆಯಿಂದಲೆ ಕೇಳಿದೆ;

" ಯಾವ ದೇವನನ್ನು ಕುರಿತು ಈ ತಪಸ್ಸು ? " ಎಂದು.

ಅವನು ಚಕಿತನಾದವನಂತೆ ನನ್ನನ್ನು ನೋಡಿದ. ಯಾರಿಗೆ ಗೊತ್ತು ? ನಾನೆ ಹುಚ್ಚ ಎಂದು ಅವನು ತಿಳಿದಿರಲೂ ಸಾಕು.

" ಹಾಗಿದ್ದರೆ ನಿಮಗೆ ಗೊತ್ತಿಲ್ಲವೆ ? " ಎಂದ.

" ಏನು ? "

" ದೇವರ ರಾಜ್ಯ ಮುಗಿಯಿತು ಈಗ, ಎಂದಿಗೊ ಮುಗಿದಿದೆ "

" ಹಹ ! " ಇದಕ್ಕೂ ಹೆಚ್ಚಿಗೆ ನಾನು ಏನನ್ನು ಮಾಡಬಲ್ಲೆ ? ಹುಚ್ಚನೊಬ್ಬ ನಿಮ್ಮನ್ನೆ ಹುಚ್ಚ ಎಂದು ತಿಳಿದಾಗ ಅವನ ಸಮಾಧಾನಕ್ಕಾಗಿ ಹುಚ್ಚನಂತೆ ನಗುವುದೆ ಒಳ್ಳೆಯದೆಂದು ನಕ್ಕುಬಿಟ್ಟೆ.

" ದೇವರ ರಾಜ್ಯ ಮುಗಿದಿದೆ" ಎಂದ ತುಸು ಆವೇಶದಿಂದ. ನಾನು ಏನನ್ನಾದರೂ ಮಾತನಾಡದೆ ಅವನಿಗೆ ಸಮಾಧಾನವಾಗದೆಂದು " ಹೇಗೊ ? " ಎಂದು ಕೇಳಿದೆ.

" ಹೇಗೆ ?—ಹೇಗೆ ? "

ಅಯ್ಯೋ ! ಭಗವಂತಾ ! ನನಗೇನು ಗೊತ್ತು ಹೇಗೆ ನಿನ್ನ ಆಟ ಎಂಬುದು ಎಂಬ ವಿಚಾರದಿಂದ ಉಗುಳ್ನುಂಗುತ್ತ ನಿಂತುಬಿಟ್ಟೆ.

" ಹೇಗೆ ? ನಿಮಗೆ ಗೊತ್ತಿಲ್ಲವೆ ? ಕೇಳಿ-ಈಗ ಯಾವ ದೇವನ ರಾಜ್ಯ ನಡೆಯಬೇಕೆಂಬುದರ ಬಗ್ಗೆ ವಾದ ಎದ್ದು ಯಾವನದೂ ರಾಜ್ಯವಿಲ್ಲದಂತಾಗಿದೆ."

" ಹಹ! ಒಳ್ಳೇ ತಮಾಷೆ!" ಎಂದೆ.

" ತಮಾಷೆ!" ಮೈಲಿಗೆಯಾದವನಂತೆ ಅವನು ಕನಲಿದ. " ತಮಾಷೆ ಎನ್ನುವಿರಾ? ಕೊಂಚ ಕಾಲ ತಡೆಯಿರಿ. ಆ ಸಾವಿರಾರು ದೇವರು ಭೂಮಿಗಿಳಿದು ಬಹುಮತ ಗಳಿಸಲಿಕ್ಕೆ ಓಡಾಡಿ ನಮ್ಮ ನಿಮ್ಮನ್ನೆ ಪೀಡಿಸತೊಡಗಿದರು ಎಂದರೆ-"

" ಹಹ!"

" ಎಲ! ಸುಮ್ಮ ಸುಮ್ಮನೆ ಹಲ್ಲು ಕಿರಿಯುವಿರಲ್ಲ? ನಿಮಗೇನು ಹುಚ್ಚು ಹಿಡಿದಿಲ್ಲವಷ್ಟೆ?" ಎಂದು ಅಬ್ಬರಿಸಿದ.

" ಅಲ್ಲಲ್ಲ. ದೇವರೂ ನಮ್ಮ ಹಾಗೆ ರಾಜಕಾರಣದೊಳಗೆ—"

" ನಿಮಗೆ ಹುಚ್ಚು ಹಿಡಿದಿದೆಯೊ ಇಲ್ಲವೊ, ಆದರೆ ಬುದ್ಧಿ ಮಾತ್ರ ಇಲ್ಲ" ಎಂದು ನನ್ನ ಮಾತನ್ನು ಮುಗಿಸಗೊಡದೆಯೆ ನುಡಿದ. " ದೇವರು ರಾಜಕಾರಣ ದೊಳಗೆ ತೊಡಗದಿದ್ದರೆ ಇನ್ನು ಯಾರು ತೊಡಗಬೇಕು? ಒಂದು ಕಡ್ಡಿಯ ಕೆಲಸ ಕೈಯಿಂದೆತ್ತಿ ಮಾಡದೆಯೆ ಭಕ್ಷ್ಯಭೋಜ್ಯ ದೊರೆಯುವ ದೇವರೇನು, ಯಾರೇನು? ಅಂಥವರೆ ರಾಜಕಾರಣದಲ್ಲಿ ತೊಡಗುವರು, ದೊರೆಯುವ ಭಕ್ಷ್ಯಭೋಜ್ಯಗಳ ಪೂರೈಕೆ ಕಡಿಮೆ ಆದರೆ!"

" ನಮ್ಮ ದೇಶದಲ್ಲಿ ಇನ್ನೂ—"

" ಅಯ್ಯೊ! ನಿಮ್ಮ ದೇಶವೆ? ದೇವನ ಮಾತು ನಾನು ಹೇಳತಾ ಇದ್ದೀನಿ, ದೇಶವೆಲ್ಲಿಂದ ಬಂದಿತು? ನನ್ನ ಭಕ್ತರ ಸಂಖ್ಯೆ ಕಡಮೆ ಆಯಿತು ಅಂತ ಒಬ್ಬನಿಗೆ ಅಸಮಾಧಾನ, ನನ್ನ ಭಕ್ತರದು ಬಹುಮತ ಇದ್ದರೂ ನನಗೆ ಅಧಿಕಾರ ಜಾಗ ಇಲ್ಲ ಅಂತ ಇನ್ನೊಬ್ಬನಿಗೆ ಅಸಮಾಧಾನ, ನನ್ನ ಭಕ್ತರಿಗೆ ನೌಕರೀನೇ ಇರದಿದ್ದರೆ ನನಗೆ ನೈವೇದ್ಯ ದೊರೆಯುವುದು ಹೇಗೆ ಅಂತ ಇನ್ನೂ ಒಬ್ಬನ ಫಿರ್ಯಾದು—ಅಂತೂ ಇಂತಹರದೊಬ್ಬರದು ಅಂತ ಅಧಿಕಾರ ಇಲ್ಲವೇ ಇಲ್ಲ—?

" ಅದಕ್ಕೆ ನೀವೇನು ಮಾಡಬೇಕು ಎನ್ನುವಿರಿ? ದೇವರೇ ಇಲ್ಲದಾಗ ತಪಸ್ಸು ಯಾರಿಗಾಗಿ?"

" ದೇವರೊಳಗೆ ಅಂತಃಕಲಹ ಎದ್ದುದರ ಲಾಭ ಪಡೆದುಕೊಂಡು ನಾವು ಒಂದಾಗೋಣ."

" ಅದಕ್ಕೆ ಈ ತಪಸ್ಸು ಯಾಕೆ? ಈ ತಪಸ್ಸಾದರೂ ಎಂತಹದು?"

" ಈ ತಗ್ಗನ್ನು ನೋಡಿದಿರಲ್ಲ? ಇದರಲ್ಲಿ ನನ್ನ ತಲೆಯನ್ನು ಹೂತು ಶೀರ್ಷಾಸನ ಹಾಕುವೆ."

" ಇದೇನು ವಿಚಿತ್ರ?"

" ವಿಚಿತ್ರ ಯಾಕೆ, ಸ್ವಾಮೀ? ಇದು ತಲೆಯ ಕೆಲಸ. ತಲೆಯನ್ನುಪಯೋಗಿ ಸಿಯೆ ಸಾಧಿಸಬೇಕಾಗಿದೆ."

" ಅದೆಲ್ಲ ನಿಜ. ಆದರೆ ನೆಲದೊಳಗೆ ಹೂತು ಏನು ಸಾಧಿಸುವಿರಿ ?"

" ನೆಲದಲ್ಲಿ ಹೂತು, ಮೇಲೆ ನೀರು ಹಾಕುವೆ ಕ್ರಮೇಣ ಬಿತ್ತಿದ ಬೀಜದಂತೆ ನನ್ನ ತಲೆ ಬೇರೂರುವುದು, ಕೆಲಕಾಲದಲ್ಲಿ ಬೆಳೆದು ಅನೇಕ ತಲೆ ಹಣ್ಣುಗಳಾಗುವುವು—"

" ಹಹಹ ! " ನನಗೆ ನಗೆ ತಡೆಯದಾಯಿತು ಒಳ್ಳೇ ತಲೆ ! ತಲೆಯನ್ನು ಬಿತ್ತಿ ಬೇರೆ ತಲೆಗಳನ್ನು ಬೆಳೆಯಿಸಬೇಕೆಂಬ—

" ಯಾಕೆ ? ನಗುವಿರಿ ಯಾಕೆ ? ಅದಕ್ಕಾಗಿ ಈ ಮಂತ್ರವನ್ನು ಹೇಳುತ್ತಿರುವೆ. ಇಷ್ಟು ದಿನಗಳವರೆಗೆ ನಾನಾತರದ ದೇವರುಗಳು ಬಂದು ನಾವು ಒಂದಾಗದಂತೆ ಸಫಲ ಪ್ರಯತ್ನ ಮಾಡಿದ್ದರು ; ಅದರಿಂದ ಅಪರ ಸರ್ವಾರ್ಥಸಿದ್ಧಿ ಇದ್ದಿತು. ಆದರೆ ನಾಳಿನಿಂದ ನಾವೆಂಬರೆಲ್ಲಾ ಒಂದು—"

" ಆದರೂ ಪಂಚಕರ್ನಾಟಕ ಎನ್ನುವಿರಲ್ಲ ? "

" ಪಂಚ ಅಂದರೂ ಪರವಾ ಇಲ್ಲ, ' ಕರ್ನಾಟಕ ' ಎಂದರೆ ಸಾಕು."

" ಇದು ನಿಮ್ಮ ತಲೆಯೊಳಗಿನ ವಿಚಾರ."

" ಅದಕ್ಕೇ ಅಲ್ಲವೆ ನನ್ನ ತಲೆಯನ್ನು ಬಿತ್ತುತ್ತಾ ಇದ್ದುದು ? ಬೆಳೆಯೋವಾಗ ' ಪಂಚ ' ಅನ್ನೋದು ಬೇರಿನಲ್ಲಿಯೆ ಉಳಿದು ' ಕರ್ನಾಟಕ ' ಅನ್ನೋದೊಂದೇ ಮೇಲೆ ಬರಲಿ ಎನ್ನೋದಕ್ಕೆ ತಪಸ್ಸು " ಎಂದ.

ನಾನು ಗಟ್ಟಿಯಾಗಿ ನಕ್ಕೆ.

" ಇಷ್ಟೊಂದು ಪರಿ ಗಟ್ಟಿಸಿ ನಗುವಂತಹ ಯಾವ ಕನಸನ್ನು ಕಂಡಿರಿ ? " ಎಂದು ಬಸ್ಸಿನಲ್ಲಿ ನನ್ನ ಪಕ್ಕಕ್ಕೆ ಕುಳಿತ ಮುಂಬಯಿ—ಏನು ' ಮಹಾರಾಷ್ಟ್ರ ' ಎನ್ನಬೇಕೊ—ಕರ್ನಾಟಕದವರೊಬ್ಬರು ಕೇಳಿದರು. ಅವರಿಗೆ ಯಾವ ಸಂಶಯವೊ? " ನೀವು ಎಲ್ಲಿಯವರು ? " ಎಂದು ಕೇಳಿದರು. " ನಾನು ಹೈದ್ರಾಬಾದ-ಅಲ್ಲ, ಆಂಧ್ರ ಕರ್ನಾಟಕದವ " ಎಂದೆ.

ಎನೀ ಮೋರ್ ಟಿಕೆಟ್ಸ್ ?—ಎಂದ ಕಂಡಕ್ಟರ. ಆದರೆ ಬಸ್ಸು ಯಾವ ನಿಟ್ಟಿಗೆ ಹೊರಟಿತ್ತು ?

—ಶ್ರೀರಂಗ್.

" ಅರ್ಹನಾರೀ ಜಗದಿ "

— ೦ —

"ಮಂತ್ರಿ! ಅಲ್ಲಲು — ಇವನೊಬ್ಬ ಕಂತ್ರಿ!" ಉರುಳಿಸಲವನ ಹೂಡೊಂದು ತಂತ್ರ! ಮೆಂಬರುಗಳಿಗೆಲ್ಲ ಹಾಕು 'ಭೂ ಮಂತ್ರ'! ತಗೋ ಮರನೆ ಎರಡು ಭಾಗದ ಮೊಹರ ರುಜುವ, ಹೂಡು ಅವಿಶ್ವಾಸದ ನಿರ್ಣಯವ, ಇದು, ಇದುವೆ ನಮ್ಮ ರಾಜಕೀಯ! ಒಬ್ಬೊಬ್ಬರದೇ ಒಂದೊಂದು ಗುಂಪು, ಆ ಗುಂಪಿನಲಿ ಒಬ್ಬೊಬ್ಬರದು ಒಂದೊಂದು ಸಂಪು! ಗುಂಪು ಒಳಗುಂಪುಗಳ ಮಹಾಸಂತೆ, ಇದೇ ನಮ್ಮ ವಿಧಾನಸಭೆಯ ವೈಶಿಷ್ಟ್ಯವಂತೆ! ಒಬ್ಬೊಬ್ಬರದೇ ಒಂದೊಂದು ರೀತಿ, ಇದೇ ರಾಜಕೀಯ ಪುಡಾರಿಗಳ ನೀತಿ! ಪತ್ರದ ಮೂಲಭೂತ ತತ್ವಗಳ ಬುಡಮೇಲು, ಇಂಥ ಮಹಾ ಕಾರ್ಯಗಳಲ್ಲಿ ಎಲ್ಲರಿಗಿಂತ ಒಂದು ಕೈ ಮೇಲು! ಮುಖ್ಯಮಂತ್ರಿಯ ಮೇಲೆ ನೂರಾರು ಆಪಾದನೆ, ಕೂಡಲೇ ಆಯ್ತು ವಿಚಾರಣೆ! ಹೈ ಕಮ್ಯಾಂಡಿಗೆ ತಂತಿ ಮೇಲೆ ತಂತಿ, ಇದು ನಮ್ಮ ಪತ್ರಿಕೆಗಳ ನಿತ್ಯ ವದಂತಿ!

* * * *

ಬಂತು ಹೈ ಕಮ್ಯಾಂಡಿನಿಂದ ಅಪ್ಪಣೆ, "ಅರ್ಹನಲ್ಲ ಇವ ಮತ್ತೊಬ್ಬನ ಚುನಾವಣೆ." ಆಯ್ತು ಮರು ಚುನಾವಣೆ; ಮತ್ತೊಬ್ಬ ಏರಿ ಮೇಲೇರಿ ಬಂದ, ಮಂತ್ರಿಪದದ ಗಾಡಿಯ! ಮತ್ತೆ ಅದೋ ಶುರುವಾಯಿತು, ಅವಿಶ್ವಾಸದ ನಿರ್ಣಯ; ... ತಂತಿ ಮೇಲೆ ತಂ ಇದೆ ನಮ ರ ಜಕೀಯದ ನೀತಿ! ಇದನೆಲ್ಲ ಸರಿಗೊಳಿಸಲು, ದೇವಾ! ಕರುಣಿಸೊಂದು ಹೊಸ ರೀತಿ; ಇವ ಅರ್ಹನಲ್ಲ! ಅವ ಅರ್ಹನಲ್ಲ! ಅರ್ಹನಾರೀ ಜಗದಿ, ಈ ಮಂತ್ರಿಪದಕೆ! ಕಾದಿರುವೆನೋ ದೇವ ಕೈಮುಗಿದು ನಿನ್ನ ಉತ್ತರಕೆ.

— " ಎಚ್ಚೆಮ್ಪಿ "

— — —

ಶನಿ ಮಹಾತ್ಮೆ

ಕೆಲವರ ದರ್ಶನ ಮಾತ್ರದಿಂದ ಸಕಲ ಸೌಭಾಗ್ಯಗಳು ಒದಗಿ ಬರುತ್ತವೆ. ಮತ್ತೆ ಹಲವರ ನಾಮಸ್ಮರಣೆ ಮಾಡಿದರೆ ಸಾಕು, ಸಂಪೂರ್ಣ ಸಂಕಟ ನಿವಾರಣೆಗಾಗಿ. ಇನ್ನೂ ಒಂದು ತರಹೆಯ ಜನರಿರುತ್ತಾರೆ—ರೂಪ ಯಾವುದೇ ಇರಲಿ, ಎಂಥ ಸ್ಥಳವಾದರೂ ಆಗಲಿ, ಅವರು ತಮ್ಮ ನಿಮಿತ್ತ ಮಾತ್ರದಿಂದಲೆ ತರಲೆ, ತಾಪತ್ರಯಗಳನ್ನು ತರಂಗ ತರಂಗವಾಗಿ ತಂದೊಡ್ಡುವುದರಲ್ಲಿ ಸಂಶಯವಿಲ್ಲ. ಆ ರಖಮಿನವರು ಚಿರಾಯುಗಳೂ ಹೌದು ‘ಯಾರ್‍ಯಾರು ಎಲ್ಲೆಲ್ಲಿತನಕ ಬದುಕ್ಬೇಕೊಂತ ಆ ಭಗವಂತ ಒಂದ್ಸಾರ್ತಿ ತೀರ್ಮಾನ ಮಾಡಿದ ಮ್ಯೇಲೆ, ಎಂಥ ಕೆಟ್ಟವನನ್ನೂ ಬೇರೆ ಯಾರೂ ಜಗ್ಗಿಸಲಾರರು’ ಎಂಬ ರಂಗಜ್ಜಿಯ ವೇದಾಂತಕ್ಕೆ ಸಂಪೂರ್ಣವಾಗಿ ಹೊಂದಿಕೊಳ್ಳುವ ಜನರೆಂದರೆ ಇವರು. ಹೇಳಬೇಕೆಂಬುದನ್ನು ನೇರವಾಗಿ ಹೇಳಿ ಮುಗಿಸದೆ ಕಾಡುಹರಟೆಯಲ್ಲಿ ಕಾಲ ಕಳೆಯುತ್ತಿರುವದಕ್ಕೂ ಸಹ ಅವರೇ ಕಾರಣರು. ಅಂಥ ಜನ ಎಂಥವರೆಂಬುದಕ್ಕೆ ಕೆಳಗಿನ ನಿದರ್ಶನ:

ದಿನ, ಭಾನುವಾರ; ಸ್ಥಳ, ಬಾಡಿಗೆ ಮನೆ. ಮಧ್ಯಾಹ್ನದ ಊಟ—ಅಲ್ಲ, ಅಲ್ಪಾಹಾರ ಮುಗಿಸಿ, ಕೈ ತೊಳೆದುಕೊಂಡು, ಆರಾಮಾಸನದಲ್ಲಿ (ಹೊಸದು ಕೊಂಡಾಗಿದ್ದ ಹೆಸರು)—ಕ್ಷಮಿಸಿ, ಹರಾಮು ಕುರ್ಚಿಯಲ್ಲಿ (ಕೆಡಿಸಿ ಹುಡುಗರು ಮಾಡಿರುವ ನಾಮಕರಣ) ಕುಳಿತು ವಿಶ್ರಮಿಸಿಕೊಳ್ಳೋಣವೆಂದುಕೊಂಡೆ. ಸರಿ, ಇತ್ತೀಚಿನ (ನನ್ನ ಪಾಲಿಗೆ)—ಅಂದರೆ ಹಿಂದಿನ ದಿನದ ‘ಹಿಂದೂ’ ಪತ್ರಿಕೆಯ ಪ್ರಥಮಾರ್ಧ ಪುಟವನ್ನು ಹಿಡಿದುಕೊಂಡು ಹೊರಟೆ, ಮಿಕ್ಕ ಹಾಳೆಗಳನ್ನು ಹುಡುಕುತ್ತಾ. ಹೆಚ್ಚು ಹುಡುಕುವ ಅವಶ್ಯಕತೆಯುಂಟಾಗಲಿಲ್ಲ. ಇನ್ನರ್ಧ ಪುಟ ನಮ್ಮವರ ಈಳಿಗಮಣೆಯ ಕೆಳಗೆ ಕಾಯಿತುರಿ ರಸವನ್ನು ಹೀರುತ್ತಾ ಮಲಗಿತ್ತು, ಅಡಿಗೆ ಮನೆಯಲ್ಲಿ. ಸಿಟ್ಟಿನಿಂದಲೇ ಹೇಳಿದೆ:

“ಹಣ ಕೊಟ್ಟು ಪತ್ರಿಕೆ ತರಿಸುವುದು ಓದುವುದಕ್ಕೋ, ಇಲ್ಲಾ ಕಾಯಿತುರಿ ಇಡಲಿಕ್ಕೋ?”

ಬಿರುಸಿನಿಂದಲೇ ಉತ್ತರ ಬಂತು:

“ನಾನೇನು ಅಷ್ಟು ಪೆದ್ದಳೇ?... ಇದು ಶನಿವಾರದ ಪತ್ರಿಕೆ!”

ಮುಂದುವರಿಯಿತು ವಾಗ್ವಾದ :

" ನಿನ್ನ ಪಾಲಿಗೆ ನಿನ್ನೆಯ ಪತ್ರಿಕೆಯಾದರೂ ನನಗೆ ತೀರ ಈಚಿನದು ಅಂತ ಗೊತ್ತಿರಬೇಕಷ್ಟೆ ? "

" ಯಾವಾಗಲೂ ಹಿಂದುಳಿದಿರುತ್ತೀರಲ್ಲ, ಹಿಂದಿನ ದಿನದ ಪತ್ರಿಕೆಗಳನ್ನೇ ಓದಿಕೊಂಡು ? "

" ನೀನು ನನ್ನನ್ನೇ ಏಕೆ ಅನ್ನಬೇಕು, ಇಡೀ ದೇಶವೇ ಹಾಗಿರುವಾಗ ?.... ಚೀಣಾದವರು ಲೋಂಗ್ಜು ಲಪಟಾಯಿಸಿದ್ದು ಮಿಕ್ಕೆಲ್ಲ ದೇಶದವರಿಗೆ ಯಾವಾಗಲೋ ತಿಳಿದಿದ್ದರೂ, ನಮಗೆ ಗೊತ್ತಾಗಿದ್ದು ಮೊನ್ನೆಮೊನ್ನೆ ತಾನೆ? ಅದೂ ಅಲ್ಲದೆ, ನಾನು ಮುಂದುವರಿಯಬೇಕೆಂದರೂ ಬಿಡಬೇಕಲ್ಲ—ನಿನ್ನ ಪ್ರಚಂಡ ಮಕ್ಕಳು ! "

" ಹುಡುಗರ ಸುದ್ದಿಗೆ ಮಾತ್ರ ಬರಬೇಡಿ....ಅವರ ತಪ್ಪೇನೂಂತೀನಿ ಇದ ರೊಳಗೆ ?....ನಿಮಗೆ ಹೇಳಿ ಹೇಳಿ ಸಾಕಾಯಿತು – ಒಂದು ಸ್ಟೈಯಿನ್‌ಲೆಸ್ ಸ್ಟೀಲ್ ಚಚ್ಚೌಕದ ತಟ್ಟೆ ತೊಗೊಂಡ್ಬನ್ನಿ, ಈ ರಾಮಾಯಣ ಎಲ್ಲಾ ತಪ್ಪುತ್ತೇ ಅಂತ."

" ಇರೋದನ್ನೇ ಒಪ್ಪವಾಗಿಟ್ಟುಕೊಳ್ಳೋದಕ್ಕೆ ಬರೋದಿಲ್ಲ, ಹೊಸದು ಯಾಕೆ ತರಬೇಕೋ ನಾನು ಬೇರೆ ಕಾಣೆ."

" ಎಲ್ಲಾ ತಂದ್ಹಾಕಿರೋರ ಹಾಗೇ ಆಡ್ತೀರಲ್ಲ ! .. ನಮ್ಮ ತಂದೆ ಕೊಟ್ಟಿದ್ದ ಒಂದು ಪಾರ್ಕರ್ ಸ್ಕ್ರ್ಯು ಪೆನ್ಸಿಲ್ ಜೋಪಾನವಾಗಿ ಇಟ್ಕೊಳ್ಳೋದಕ್ಕೆ ಆಗದಿದ್ದ ವರು, ಅದ್ಯಾವ ಧೈರ್ಯದಿಂದ ನನ್ನ ಆಡ್ಕೊಳ್ತಿರೋ ? "—ಅವರ ಪಾಶುಪತಾಸ್ತ್ರ ಹಾರಿತು.

ಅದ್ಯಾವುದೋ ಒಂದು ವಿಷಘಳಿಗೇಲಿ, ಕೆಂಪೇಗೌಡ ಸರ್ಕಲ್ ಬಸ್ ಸ್ಟ್ಯಾಂಡ್ ಬಳಿ 11ನೇ ನಂಬರ್ ಬಸ್‌ನಲ್ಲಿ ಸೀಟು ಸಿಗಲೆಂದು ಜೇಬುತಸ್ಕರರ ದೇವರಿಗೆ ಕಾಣಿಕೆಯಾಗಿತ್ತಿದ್ದಿನಿಂದ, ನನ್ನ ಪಾಡು ಬೇಡ. ಒಪ್ಪ ವಾರಣಗಳ ಬಗ್ಗೆ ಏನಾದರೂ ಹೇಳಹೊರಟರೆ, ನನ್ನನ್ನು ಸುಮ್ಮನಿರಿಸಲು ಆ ಸಂಗತಿ ಅವರ ಮಹಾ ಅಸ್ತ್ರ. ಸರಿ, ಹಿಮ್ಮೆಟ್ಟಲಾರಂಭಿಸಿದೆ - ಸಮಾಧಾನ ತಂದುಕೊಂಡು. ' ಹಾಗೆ ಮಾಡದೆ ಬೇರೆ ದಾರಿ ಇದ್ದರೆ ತಾನೆ ' ಎಂದು ನನ್ನೆದುರಿಗೆ ಮಾತ್ರ ಅನ್ನ ಬೇಡಿ. ಮೃದುವಾಗಿ ಅಂದೆ :

" ನೋಡು ಉಮಾ, ಈಗ್ಯಾಕೆ ಸುಮ್ಮನೆ ಜಗಳ ? ಪೇಪರ್ ಕೊಟ್ಬಿಡು.... ವೃಥಾ ವಾದವೇಕೆ ? "

ಬಂದ ಉತ್ತರದಲ್ಲಿ ಮುಂಚಿನಷ್ಟು ಕಾವಿರಲಿಲ್ಲ.

"ಗಲಾಟೆ ಶುರುಮಾಡಿದ್ದು ಯಾರು....ನಾನೋ, ಇಲ್ಲಾ ನೀವೋ ?....ನಿಮ್ಮ ಪೇಪರ್ ಯಾರಿಗೆ ಬೇಕಾಗಿದೆ – ತೊಗೋಳಿ" ಎಂದವರೆ ಕಾಯಿತುರಿಯನ್ನು ನೆನೆದಿದ್ದ ಹೆಸರುಬೇಳೆಯಲ್ಲಿ ತಳ್ಳಿ ಪತ್ರಿಕೆಯನ್ನು ಕೊಡವಿ ಮುಂದೂಡಿದರು, ಬಗ್ಗಿ ಎತ್ತಿಕೊಂಡೆ. ಘಮಘಮಿಸುತ್ತಿದ್ದ ಹೆಸರುಬೇಳೆಯ ಕೋಸುಂಬರಿಯನ್ನು ನೋಡಿ ತಂದುಕೊಂಡಿದ್ದ ತಾಳ್ಮೆ ಮಾಯವಾಯಿತು, ರಕ್ತ ಕುದಿಯಿತು, ಪತ್ರಿಕೆಯನ್ನು ನೋಡಿದ ಕೂಡಲೆ. ಆ ಹಾಳೆಯಲ್ಲಿದ್ದ ಚಾ ಎನ್‌ಲಾಯ್ ಪಕ್ಕದಲ್ಲಿಯೇ ನಿಂತಿದ್ದ ನೆಹ್ರೂಜಿಗೆ ಸ್ವಲ್ಪವೂ ಬಿಡದೆ ಕಾಯಿರಸವನ್ನೆಲ್ಲಾ ತಾನೇ ಹೀರಿ ಉಬ್ಬಿದ್ದ. ಶುದ್ಧ ಭಂಡ! ಹೊಟ್ಟೆಬಾಕ! ನನ್ನ–ಅವರ ಜಗಳ, ಈ ಒಣಹರಟೆ—ಇವುಗಳಿಗೆಲ್ಲಾ ಅವನೇ ಕಾರಣಕರ್ತ. ನನಗೂ ರೇಗಿತು. ಜವಹರಲಾಲರ ಭಾವಚಿತ್ರವನ್ನು ಮಾತ್ರ ಬೇರ್ಪಡಿಸಿ ಒಳಗಿಟ್ಟು, ಉಳಿದ ಪತ್ರಿಕೆಯನ್ನು ಬಚ್ಚಲುಮನೆಯ ಒಲೆ ಯುರಿಗೆ ದಬ್ಬಿದೆ.

ಮಾರನೆಯ ದಿನ ಮುಂಜಾನೆ ಸ್ನಾನಕ್ಕೆ ಒಲೆ ಹೊತ್ತಿಸುವ ಮುನ್ನ, ಒಳಗಿದ್ದ ಬೂದಿ ತೆಗೆಯಲು ಕೈಹಾಕಿದಾಗ ನನಗೆ (ನಮ್ಮವರಿಗೆ ಎಂದು ಹೇಳಿದರೆ ನೀವು ನಂಬಬೇಕಲ್ಲ!) ಮತ್ತೆ ಸಿಕ್ಕಿಬಿದ್ದ ಚಾ—ಕೆಟ್ಟ ನಗೆ ನಗುತ್ತಾ, ಇತರ ಸುಟ್ಟ ಕಾಗದ ಗಳ ಚೂರುಗಳೊಡನೆ. ಅಗ್ನಿಪ್ರವೇಶ ಮಾಡಿಸಿದರೂ ಜೀವಂತನಾಗಿದ್ದ, ಸ್ವಲ್ಪವೂ ಕೆಡದೆ. ನಮ್ಮ ಮನೆಯ ಕಾಯಿತುರಿಯನ್ನು ಉಂಡುಹೋಗಿದ್ದ, ಮತ್ತೆ ಕೊಂಡೂ ಹೋಗಲು ಹಿಂದಿರುಗಿದ್ದ. ಈಗ ಗೊತ್ತಾಯಿತಷ್ಟೆ, ಇಂಥವರು ಎಂಥ ವರೆಂದು ?

—ಹ್ಯಾರಿ

ಸ್ಟೇಡಿಯಂ

ಅತ್ತೆ–ಸೊಸೆ ಜಗಳಾಟ ನಿತ್ಯ ನಿಯಮ
ಕುಸ್ತಿ ಡೊಂಬರಾಟ ಒಮ್ಮೊಮ್ಮೆ ಆಡಲೂ ಬಹುದಂತೆ
ತತ್ವ ಗಿತ್ವಗಳೆಲ್ಲ ನೀರಿನಲಿ ಹೋಮ
"ಸೌಧ"ವೂ ಒಮ್ಮೊಮ್ಮೆ ಸ್ಟೇಡಿಯಂ ಆಗಬಹುದಂತೆ.

—"ಎಚ್ಚೆವಿಪ್ಪಿ"

ಕಾಂಗೋ ಹಗರಣ

— ೦ —

ಕರಿ ಭೂ ಖಂಡದ
ಕಾಂಗೋ ನಾಡಿನ
ಸ್ವಾತಂತ್ರ್ಯದ ವೈಭವವೇನು!
ತಾಸು ತಾಸಿಗೂ
ಸುದ್ದಿಗಳದೆ ಹೊರೆ
ಮುಗಿಯದ ಆ ಜಂಜಾಟಗಳೇನು! ॥ ೧ ॥

ಯೂನೋ ಕರೆಸಿ
ಸೆಕ್ರೆಟ್ರಿಯು ಬರಿಸಿ
ಬುಂಚರ ಸರಿಸಿ ದಯಾಲರೆಳೆಸಿ
ಈಗೊಮ್ಮೆ ಬೈಗಳು
ಆಗೊಮ್ಮೆ ಹೊಗಳು
ಏನ್ರಾದ್ಧಾಂತ ಏನು ಜಗಳಗಳು! ॥ ೨ ॥

ಒಮ್ಮೆ ಲುಮುಂಬ
ಇನ್ನೊಮ್ಮೆ ಕಸವುಬು
ಮತ್ತೊಮ್ಮೆ ಮೊಬುಟು ಶೋಂಭೆಗಳು
ಅತ್ತ ಕಟಾಂಗ
ಇತ್ತ ಕಸಾಯಿ
ಹೆಜ್ಜೆಗೊಂದು ಶೋಂಭೇರಿಗಳು! ॥ ೩ ॥

ಒಬ್ಬರೊಬ್ಬರನು
ನೀಗಲದ್ದಿದರು
ಮೀಸೆ ಮಣ್ಣಾಯಿತೆಂದಾರು ಒಪ್ಪರು
ಪ್ರಧಾನಿ ಪ್ರೆಸಿಡೆಂಟ್
ಸೇನೆ ಪಾರ್ಲಿಮೆಂಟ್
ಯಾರು ಯಾರೊಳಗೊ ಬಲ್ಲ ದೇವರು! ॥ ೪ ॥

ಅತ್ತೊಮ್ಮೆ ಎಳೆದು
ಇತ್ತೊಮ್ಮೆ ಎಳೆದು
ಕಾಂಗ್ರೋ ದಾರದಿ ಬಲು ಗಂಟು
ದಿನ ಬೆಳಗಾದರೆ
ಬಿಡಿಸ ಹೊರಟವರು
ಮಾಡುವರದನು ಕಗ್ಗಂಟು || ೫ ||

ಕದಡಿದ ನೀರು
ಕೆಸರೋ ಕೆಸರು
ಗಾಳವಿಕ್ಕಲಿಕೊ ಎಷ್ಟು ಜನ!
ಮೀನುಗಾರ
ಕೃಷ್ಣಾಘನ ಗಾಳಕೊ
ಬಿಡುವೆ ಇಲ್ಲವೋ, ಹಾ ಸುದಿನ! || ೬ ||

ಹೇಳಿಕೆ ಸುರಿಮಳೆ
ಬಿರುಸು ಬಾಣಗಳು
ಯೂನೋದೊಳಗೋ ಬಲು ಗುಲ್ಲು
ಮುಷ್ಠಿಗೆ ನೋವು
ಡೆಸ್ಕೋ ಪುಡಿ ಪುಡಿ
ಕಾಂಗ್ರೋ ಹಗರಣ ಎಲ್ಲೆಲ್ಲು!
ಗಡಿಬಿಡಿ ಸಂತೆಯು ಗತಿ ಅಲ್ಲು! || ೭ ||

(ಕಡಂಗೋಡ್ಲು ಅವರ ಕ್ಷಮೆ ಬೇಡಿ)

—ರಾಮಿ

— ★ —

ಮಹಾಸಂತೆ

ಕ್ಷಣಕೊಂದು ರೀತಿ, ಕುಡಿದವನ ಜ್ಞಾನ
ಒಬ್ಬೊಬ್ಬರದೇ ಒಂದೊಂದು ನೀತಿ ವಿಧಾನ
ಗುಂಪು ಒಳಗುಂಪುಗದೊಂದು ಭಾರೀ
ಇದೇ ನಮ್ಮ ವಿಧಾನ ಸಭೆಯ ವೈಶಿಷ್ಟ್ಯವಂತೆ.

ಮುಗಿಲುಹಳ್ಳಿ ಮಾರ್ಕೆಟ್

ನನಗೆ ಗೊತ್ತು; ನನ್ನ ಓದುಗರು ಇದೀಗ ಹೀಗೆ ಹೇಳುತ್ತಿದ್ದಾರೆ: "ಓ! ಆ ಅರಾಸೆಯೆಲ್ಲಿ? ವಿಫಲಪ್ರೇಮ, ಕವಿಜೀವನ, ಕಾವ್ಯ ಮೀಮಾಂಸೆಗಳ ಸಂಶೋಧಕನಾಗಿದ್ದ, ನಗೆಗಾರನೆಲ್ಲಿ? ಮುಗಿಲುಹಳ್ಳಿಯ ರಾಜಕೀಯ ಅವನನ್ನು ಆವರಿಸಿದ್ದಲ್ಲದೆ ನುಂಗಿಯೂಬಿಟ್ಟಿತೆ? ಆಹ್ಲಾದದಾಯಕವಾದ ಅಭ್ಯಾಸ, ನಿವಾರಿಸಲಾಗದ ದುಶ್ಚಟವಾಗಿ ಪರಿಣಮಿಸಿತೇ?" ಹೀಗೆಂದುಕೊಂಡ ಅವರು 'ಅರಾಸೇ, ಮುಗಿಲು ಹಳ್ಳಿಯನ್ನು ಬಿಟ್ಟುಬಿಡು. ಹಾಗಲ್ಲದೆ ನಿನ್ನ ಲೇಖನಗಳಿಗೆ ಸದ್ಗತಿ ದೊರೆಯಲಾರದು!' ಎನ್ನುತ್ತಿದ್ದಾರೆ.

ಅಂತಹವರಿಗೆ ನನ್ನ ಉತ್ತರ ಇದು: ಹಿಂದೆ ಧರ್ಮಜನು ದ್ರೌಪದಿ ಮತ್ತು ತಮ್ಮಂದಿರೊಡನೆ ಸ್ವರ್ಗಾರೋಹಣಕ್ಕೆಂದು ಹೊರಟನು. ದಾರಿಯಲ್ಲಿ ಕ್ರಮವಾಗಿ ದ್ರೌಪದಿಯೂ ಉಳಿದ ಪಾಂಡವರೂ ಸತ್ತುಬಿದ್ದರು. ಜೊತೆಯಲ್ಲಿ ನಾಯಿಯೊಂದು ಮಾತ್ರ ಬರುತ್ತಲೇ ಇತ್ತು. ಇಂದ್ರನ ರಥ ಬಂತು. ಇಂದ್ರ 'ರಥ ಹತ್ತು ಧರ್ಮಜಾ,' ಎಂದ. ಧರ್ಮಜ "Come along Pup ; yes I am ready' ಎಂದ. ಇಂದ್ರ ವಿಸ್ಮಿತನಾದ 'ಧರ್ಮಜಾ ಈ ಕುನ್ನಿಯನ್ನು ಬಿಟ್ಟುಬಿಡು. ಇಲ್ಲದಿದ್ದರೆ ನೀನು ಸ್ವರ್ಗಕ್ಕೆ ಬರಲಾರೆ' ಎಂದ. 'Oh Is that really so, Dont be silly Sir. ಕುನ್ನಿಯಿಲ್ಲದೆ ನಾನು ಬರಲಾರೆ' ಎಂದ ಧರ್ಮಜ. ಇಂದ್ರ 'ಅದೇಕೆ?' ಎಂದು ಕೇಳಿದ. ಉತ್ತರವಾಗಿ ಧರ್ಮಜ ಹೇಳಿದ 'ಅದು ನನ್ನ ಧರ್ಮ' ಎಂದು. ಧರ್ಮಜನ ಉತ್ತರವೇ ನನ್ನ ಉತ್ತರ. ಮುಗಿಲುಹಳ್ಳಿಯ ಚರಿತ್ರೆ ಬರೆಯುವುದು ನನ್ನ ಧರ್ಮ ಎಂದು ಭಾವಿಸಿದ್ದೇನೆ. ಇದು ನನ್ನ ಕರ್ಮವಿದ್ದರೂ ಇರಬಹುದು.

ಭಾರತ ನಕಾಶದಲ್ಲಿ ಮುಗಿಲು ಹಳ್ಳಿಗೊಂದು ಸ್ಥಾನ ದೊರೆತಿದ್ದರೆ ಅದು ವ್ಯಾಪಾರದಿಂದ. ಮುಗಿಲುಹಳ್ಳಿಯ ವಾಣಿಜ್ಯ, ಮಂಡೀಪೇಟೆ, ದೊಡ್ಡಪೇಟೆ, ಚಾಕೀಪೇಟೆ ಮತ್ತು ಸಂತೇಪೇಟೆಗಳೆಂಬ ನಾಲ್ಕು ಗೋಡೆಗಳನ್ನೊಳಗೊಂಡ ಒಂದು ದುರ್ಗಮದುರ್ಗ. ಇದನ್ನು ಗೆಲ್ಲಲೆಂದು ಬಂದ ಪಂಜಾಬಿನ ಸಿಂಗರೂ, ದಕ್ಷಿಣದ ಕೊಂಗರೂ, ಮಧ್ಯಪ್ರದೇಶ ಪೂರ್ವಪ್ರಾಂತಗಳ ಘಟಾನುಘಟಿಗಳೂ ಟಾಂಗ್

ಫಿರಾಂಗ್ ಆಗಿದ್ದಾರೆ. ಇಲ್ಲಿನ ವಣಿಜರ ಆರ್ಥಿಕ ಪರಿಸ್ಥಿತಿಯನ್ನು ನೋಡಿ, ಷೆಡ್ಯೂಲ್ಡ್ ಬ್ಯಾಂಕುಗಳು ತಲೆಕೊಡವಿ ಹಲ್ಕಿರಿದಿವೆ. ಆದರೇನಂತೆ! ಯಾರೂ ಏನೂ ಮಾಡುವ ಹಾಗಿಲ್ಲ. ಈ ಅಪೂರ್ವ ಪರಂಪರೆ ತದ್ವತ್ತಾಗಿಯೇ ಮುಂದು ವರಿಯುತ್ತಿದೆ.

ಈ ಮಹಾನುಭಾವರು ಯಾರು? ಎಂತಹವರು? ಅವರ ಯಶಸ್ಸಿನ ರಹಸ್ಯ ವೇನು? ಅವರ ಬುದ್ಧಿ ಎಷ್ಟು ತೀಕ್ಷ್ಣವಾದುದು? ಉತ್ತರಗಳು ಬಹುತೇಕ ನಿರಾಶಾ ದಾಯಕ. ಈ ಉದಾಹರಣೆಯನ್ನು ಪರಿಶೀಲಿಸಿ ನಮ್ಮ ಊರಿಗೆ ಫೋನು ಬಂದು ಆಗಲೇ ಎಂಟು ಹತ್ತು ವರ್ಷವಾಗಿರಬಹುದು, ಮೊನ್ನೆ ಮೊನ್ನೆ ಮುಗಿಲುಹಳ್ಳಿಯ ತೈಲ ಚಕ್ರವರ್ತಿಯೊಬ್ಬರು ಟೆಲಿಫೋನ್ ರಿಸೀವರನ್ನು ಕೈಗೆತ್ತಿಕೊಂಡರು.

"ಕಳ್ನನ ನೇ, ಪಿಟರಿ ...ನೇ ಭೋಸು ...ಕೇ, ಪುಗ್ನಟ್ಟೆ ಬರ್‍ತ್ತೇನೋ ದುಡ್ಡು? ಹೇರಿಸ್ದೇನೋ ಆ ಬ್ಯಾರಲ್...." ಎಂದು ವಾಚಾಮಗೋಚರವಾಗಿ ಬೈಗಳನ್ನು ಅದರೊಳಕ್ಕೆ ತುರುಕುತ್ತಿದ್ದರು.

ಆ ತುದಿಯಿಂದ 'ನಂಬರ್ ಪ್ಲೀಸ್' ಎಂದು ಬಂದಿತು ಉತ್ತರ.

'ಬ್ಯಾರಲ್ ಹೇರ್‍ಸ್ನೋ ಕಳ್ನನ....ನೇ ಅಂದ್ರೆ, ನಂಬರ್ ಪ್ಲೀಸ್ ಅಂತಿಯಾ?' ಎಂದರು ತೈಲ ಚಕ್ರವರ್ತಿಗಳು.

'ನಂಬರ್ ಪ್ಲೀಸ್....' ಎಂದಿತು ಆ ತುದಿ.

'ಎಲೇ ಯಾರದೀರೋ ಅಲ್ಲಿ ಮಿಲ್ಲಿಗ್ಹೋಗಿ, ಆ ಭಂಡ ಸೂ ...ನ್ನ ತದ್ಹಾಕ್ರೋ ಕಕವ, ಎಲೇ ಮಂಗಾ, ಬ್ಯಾರಲ್ ಏನ್ಮಾಡ್ದೆ?'

'ನಂಬರ್ ಪ್ಲೀಸ್....'.

'ಎಕ್ಸ್‌ಛೇಂಜ್, ಎಕ್ಸ್‌ಛೇಂಜ್ ಯಾರದಿರೀ ಅಲ್ಲಿ ನಮ್ಮ ಫೋನು ಕೆಟ್ಟತೆ. ನಮ್ಮ ಮಿಲ್ಲಿಂದ ಬರೇ ನಂಬರ್ ಪ್ಲೀಸ್ ಅಂತ ಅಂತತೆ. ಯಾತಕ್ಕಿಟ್ಗಂಡಿದಿರಿ ಫೋನು, ಕಿತ್ಗಂಡ್ಹೋಗ್ರಿ'

'ಮಿಲ್‌ನಂಬರ್ ಪ್ಲೀಸ್....'

"ತ್ರೀ ಟೂ ನೈನ್, ಮುನ್ನೂರು ಇಪ್ಪತ್ತೊಂಬತ್ತು. ಎಷ್ಟೈಹೊತ್ ಬೇಕಲೇ ನಂಬರ್ ಕೇಳಕ್ಕೆ ನಿನ್ಗೆ. ನಿದ್ದೆ ಮಾಡ್ತಿದ್ದೇನೋ ನೀನು?" ಎಂದು ಕೇಳಿದರು ತೈಲ ಚಕ್ರವರ್ತಿಗಳು.

ತೊಗರೀಬೇಳೆ ರಾಜರನ್ನು ಭೇಟಿ ಮಾಡಿ: ಇವರೇ, ಸಿದ್ದಣ್ಣೋರು ತೆಳ್ಳಗೆ ಕೋಳಿ ಇದ್ದ ಹಾಗಿದ್ದಾರೆ. ಮೈಗೆ ಚೆನ್ನಾಗಿಲ್ಲ, ಹಾಸಿಗೆ ಹಿಡಿದಿದ್ದಾರೆ. ಮೊನ್ನೆ ತಾನೆ ನಾಲ್ಕುಸಾವಿರ ಚೀಲ ತೊಗರೀಬೇಳೆ ಕೊಂಡುಕೊಂಡಿದ್ದಾರೆ. ರೇಟು ಚೀಲಕ್ಕೆ ಎಂಟೆಂಟು ರೂಪಾಯಿ ಕಡಿಮೆಯಾಗಿದೆ. ಯಾರ ಮೈಲಿ ಚೆನ್ನಾಗಿರುತ್ತದೆ ಹೇಳಿ ಮೂವತ್ತೆರಡುಸಾವಿರ ಗುಂಡಿ ಪಾಲಾದರೆ? ಜ್ವರ ಏರಿದೆ. 'ಏನು ರೇಟ್ ಬಂತೋ?' 'ಏನಂತತೋ ಆಗ್ರಾ?' 'ಮೊರೇನಾದಿಂದ ಯಾವ ರೇಟ್ ಬಂತೋ?' 'ಕಾನ್ಸಲ್ ಮಾಡಿಬಿಡೋ' ಎಂದು ನರಳುತ್ತಾ ಇದ್ದಾರೆ. ಡಾಕ್ಟರು ಬಂದರು. ಸಿದ್ದಣ್ಣನವರಿಗೆ ಸರಿಯಾಗಿ ತಿಳಿದಿಲ್ಲ ಇವರು ಡಾಕ್ಟರೆಂದು. 'ಆಗ್ರಾ ಏನು ರೇಟು ಬಂತು?' ಎಂದು ಅಸ್ಪಷ್ಟವಾಗಿ ಕೇಳಿ ಸುಮ್ಮನೆ ಮಲಗಿದರು ತೊಗರೀಬೇಳೆ ರಾಜರು. ಡಾಕ್ಟರು ಥರ್ಮಾಮೀಟರ್ ರೀಡಿಂಗ್ ತೆಗೆದುಕೊಳ್ಳುತ್ತಾ 'ನೂರಾ ಎರಡು' ಎಂದರು. ಸಿದ್ದಣ್ಣ 'ಹಾಂ!' ಎನ್ನುತ್ತ ಎದ್ದು ಕುಳಿತ. 'ತೊಗ್ರಿ ಬ್ಯಾಳಿ ನೂರಾ ಎರಡಾತೇ? ಮಾರೋ ನಾಕು ವಾಗೀನು. ಉಳ್ದದ್ದೆಲ್ಲಾ ಹೇರ್ರೋ ಗೋಡೌನಿಗೇ!' ಎಂದರು. ತಿಳಿಯಿತೇ, ಮುಗಿಲುಹಳ್ಳಿಯವರೇನೂ ವಾಣಿಜ್ಯ ದೇವತೆಗಳಲ್ಲ. ಗುಗ್ಗುಗಳು. ಆದರೆ ಅವರೆಲ್ಲಾ ಘನವಾಗಿ ವ್ಯಾಪಾರ ಮಾಡಿ ಇನ್ಕಂಟ್ಯಾಕ್ಸ್ ಕೊಡುತ್ತಾರೆ. ಅವರನ್ನು ಹಾಸ್ಯ ಮಾಡುವವರು, ಕಾಫಿಗೆ ದುಡ್ಡಿಲ್ಲದೆ ಲಾಟರಿ ಹೊಡೆಯುತ್ತಾರೆ.

ಮುಗಿಲುಹಳ್ಳಿಯವರು ಸಾಹಸಿಗಳು. ಉತ್ತರದ ಭಟಿಂಡಾ ಕಡ್ಲೇಬೇಳೆಯಿಂದ ಹಿಡಿದು, ಕೊಚಿನ್ನಿನ ಕೊಬರಿ ಎಣ್ಣೆಯವರೆಗೂ ಎಲ್ಲಾ ವ್ಯಾಪಾರಗಳನ್ನೂ ಮಾಡುತ್ತಾರೆ. ಬೆಜವಾಡದ ಅಕ್ಕಿ, ಕಲ್ಕತ್ತಾದ ಖಾಲೀ ಚೀಲ, ಉಂಝಾದ ಜೀರಿಗೆ, ದೋಹದ್ ಕಡಲೇ ಹಿಟ್ಟು, ಅಲಿಘರ್ ತೊಗರೀಬೇಳೆ ಎಲ್ಲವೂ ಇವರಿಗೆ ಗ್ರಾಸ. ಭಟಿಂಡಾ, ಆಗ್ರಾ, ಮೊರೆನಾ, ಬೊಂಬಾಯಿಗಳು ನಮ್ಮೂರಿನವರಿಗೆ ಅಡಿಗೆಮನೆ, ನಡುಮನೆ, ಪಡಸಾಲೆಗಳಿದ್ದ ಹಾಗೆ.

ಇಷ್ಟೇ ಅಲ್ಲ ಕನ್ನಡನಾಡಿನ ಕೀರ್ತಿಧ್ವಜವನ್ನು ಇವರು ಎತ್ತಿ ಹಿಡಿಯುತ್ತಾರೆ. ಗುಜರಾತಿನ ಪೋರಬಂದರಿಗೆ ಸಜ್ಜೆ ಹೇರುತ್ತಾರೆ. ಮಹಾರಾಷ್ಟ್ರಕ್ಕೆ ರಾಗಿ, ಮುಂಡಕ್ಕಿ ತಿನ್ನಿಸುತ್ತಾರೆ. ಕಾಳಿದಾಸನ ಉಜ್ಜಯನಿಗೆ ಜೋಳ ಕಳಿಸುತ್ತಾರೆ, ತರಿಸುತ್ತಾರೆ. ದಿಂಡಿಗಲ್ಲಿಗೆ ಜೋಳ, ವಿಳ್ಳುಪುರಂಗೆ ಜೋಳ, ಮದರಾಸಿಗೆ ಸಜ್ಜೆ ಮತ್ತು ಜೋಳ ಕಳಿಸುತ್ತಾರೆ. ತಿರುಪತ್ತೂರಿಗೆ ರಾಗಿ ಕಳಿಸುತ್ತಾರೆ. ಬೊಂಬಾಯಿಗೆ ಸೇಂಗಾ, ಹತ್ತಿ ಕಳಿಸುತ್ತಾರೆ. ಇಷ್ಟೆಲ್ಲಾ ಮಾಡಿದರೂ ಮುಗಿಲುಹಳ್ಳಿಯ ಮಕ್ಕಳು ತಮ್ಮತನ, ಕನ್ನಡತನ, ಮುಗಿಲುಹಳ್ಳಿ ಸ್ಪಿರಿಟ್‌ಗಳನ್ನು ಕಳೆದುಕೊಳ್ಳುವುದಿಲ್ಲ.

ಬಕ್ಕ, ಶಿವಯೋಗಿ, ವೀರ್ಭದ್ರಿ, ಕಲ್ಗ, ಚಂಬಸ್ಯ ಮೊದಲಾದ ಪ್ರಭೃತಿಗಳು ಆಗ್ರಾಕ್ಕೆ ಹೋದ ಕತೆಯನ್ನು ಕೇಳಿದರೆ ನಿಮಗೆ ಮುಗಿಲುಹಳ್ಳಿ ಸ್ಪಿರಿಟ್ ಎಂದರೇನು

ಎಂಬುದು ತಿಳಿಯುತ್ತದೆ. ಈ ಐವರೂ ಆಗ್ರಾಕ್ಕೆ ಹೋದರು. ಅಲ್ಲಿ ಮೂರು ತಿಂಗಳು ಬೆಲನ್‌ಗಂಜ್ ತಪ್ಪಿದರೆ ಕಿನಾರೀ ಬಜಾರುಗಳಲ್ಲೀ ಅಡ್ಡಾಡುತ್ತಾ, ತೊಗರೀಬೇಳೆ ಖರೀದಿ ಮಾಡುತ್ತಾ ಕುಳಿತರು. ಆ ವರ್ಷ ರೈಲ್ವೆ ಬುಕ್ಕಿಂಗ್ ದಕ್ಷಿಣ ಭಾರತಕ್ಕೆ ಮೂರು ತಿಂಗಳೂ ಕ್ಲೋಸ್ ಆಗಿತ್ತಂತೆ ಮಾಲು ರವಾನೆ ಆಗಲೇ ಇಲ್ಲ. ವ್ಯಾಪಾರಗಳೆಲ್ಲಾ ಮುರಿದು ಹೋದವು. ಇವರ ಅಂಗಡಿ ಸಾಹುಕಾರರೆಲ್ಲಾ ಇವರನ್ನು ಬೈದು ಕಾಗದ ಬರೆಯಲಾರಂಭಿಸಿದರು. ಉದಾಹರಣೆಗೆ ಒಂದು ಕಾಗದ: ಕುರಿ ನನ....ನೇ,

ಮಕರೇ, ಏನ್ಮಾಡ್ಕೆಂತ ಕುಂತೆ? ಯಾತಕ್ಕೆ ಋಣಗೂಳು ತಿಂತೀ? ಏನು ವ್ಯಾಪಾರ ಮಾಡೆದಿ? ಮೂರು ತಿಂಗಳಾಗದರೂ ಒಂದು ವಾಗೀನು ನಿನ್ನ ಕೈಲಿ ಬುಕ್ ಮಾಡಕ್ಕಾಗದಿದ್ರೆ, ನೀನೇನು ಮನುಶ್ಯಾನೋ ದನವೋ? ಹಡಿ ಬಿಟ್ಟೆ ದುಡ್ಡು ಅಂತ ಮಜಾ ಮಾಡ್ಕೆಂತ ಕುಂತೆಯಾ? ನೀನು ಅಯೋಗ್ಯ ತಿಳಿಯುವುದು ಕೂಡ್ಲೇ ಹೊರಟು ಬಾ, ಭಂಡ ನನ ...ನೇ ಥೂ ಥೂ ಥೂ ಥೂ, ಎಷ್ಟು ಉಗಳಿದರೂ ನಿನಗೆ ನಾಚಿಕೆಯಿಲ್ಲ ತಿಳಿಯುವುದು. ನೀನು ಅಯೋಗ್ಯ ತಿಳಿಯುವುದು.

ಇಂತೀ,

ಇಂಥ ಕಾಗದಗಳನ್ನು ನೋಡಿ ನೋಡಿ ಅವರಿಗೆ ಬೇಸರ ಬಂತು. ಎಂಥ ಹೊಲಸು ಊರು ಆಗ್ರ? ಇಲ್ಲಿ ತೊಗರೀಬೇಳೆ ಬಿಟ್ಟರೆ ನೋಡಲು ಇನ್ನೇನೂ ಇಲ್ಲವಲ್ಲ? ಎಂದುಕೊಂಡರು. ' ತಗ್ಯಲೇ ಅಡ್ಡಾಡ್ಕೆಂಡು ಬರನ ' ಎಂದುಕೊಂಡರು. ' ಈ ಊರ್ನೆಗೆ ನೋಡಕ್ಕೆ ಬರೇ ತೊಗರೀಬ್ಯಾಳೆನೋ? ಇನ್ನೂ ಏನಾರ ಐತೋ? ' ಎಂದು ಅವರಿವರನ್ನು ಕೇಳಿದರು. ' ತಾಜ್‌ಮಹಲ್ ಇದೆಯಲ್ಲಾ, ಒಮ್ಮೆ ನೋಡಿಕೊಂಡು ಬನ್ನಿ ' ಎಂದರು ಅಲ್ಲಿನ ವ್ಯಾಪಾರಿಗಳು. ' ಅದ್ನೇದು ನೋಡದು ತಗ್ಯಲೇ; ಏನು ನಮ್ಮೂರಿನ ಬಕ್ಕಪ್ಪನ ಗುಡಿಗಿಂತ ಛನಗಿದ್ದೀತೇ? ' ಎಂದ ಬಕ್ಕ. ' ಹೆಂಗಾರ ಆಗ್ಲಿ ' ಎಂದುಕೊಂಡು ತಾಜಮಹಲಿಗೆ ಹೋದರು. ಆ ದಿವಸ ಶುಭ್ರಾಭ್ರದಲ್ಲಿ ಚಂದ್ರ ಬೆಳಗುತ್ತಿದ್ದನು. ಆ ಕಟ್ಟಡವನ್ನು ಜ್ಯೋತ್ಸ್ನೆಯಲ್ಲಿ ನೋಡಿ ಇವರು ಪರವಶರಾದರು. ' ತಗ್ಯಲೇ, ಹುಟ್ಟಿದ್ದಕ್ಕೆ ಸಾರ್ಥಕ ಆತು. ಇಂಥದ್ದೈತೆ ಅಂತ ಯಾವನೂ ಹೇಳ್ಬಾರ್ದೆ ಇಷ್ಟುದಿನ? ' ಎಂದು ಮಾತಾಡಿಕೊಂಡರು. ಈ ಮಹದಾನಂದದ ಸಂದರ್ಭವನ್ನು ಹೇಗೆ ಆಚರಿಸುವುದು? ಮಂಡಕ್ಕಿ ಖಾರ ತಿಂದರೆ ಈ ಸಂದರ್ಭ ಸಫಲವಾಗುತ್ತದೆ. ಸರಿ, ತಾಜಮಹಲನ್ನು ಬಿಟ್ಟು ಊರನ್ನೆಲ್ಲಾ ತಡಕಾಡಿ ಕೊನೆಗೊಮ್ಮೆ ಮಂಡಕ್ಕಿ ಖಾರಗಳನ್ನು ಹುಡುಕಿ, ಪಂಚೀರು ನೀರುಳ್ಳಿ ಜಜ್ಜಿ ತಿಂದು, ಚಹಾ ಕುಡಿದು ಬೀಡಿ ಸೇದಿ ಬೆಚ್ಚಗೆ ಮಲಗಿಬಿಟ್ಟರು. ಮರುದಿನವೇ ಮುಗಿಲು ಹಳ್ಳಿಗೆ ಹೊರಟರು.

ಈ ಮಹಾನುಭಾವರಿಂದ ತುಂಬಿದ ಈ ಅಭೇದ್ಯ ದುರ್ಗದಲ್ಲಿ 'ವ್ಯಾಪಾರಸ್ಥನ ಮಗ'ನಲ್ಲದವನಿಗೆ ಅವಕಾಶವಿಲ್ಲ. ಬಂದರೂ ಮಾರಿಯ ಜಾತ್ರೆಗೆ ಬಂದ ಕುರಿಯಂತೆ ಅವನು ಪಶುವಾಗಲು ಬರಬೇಕೆ ಹೊರತು, ಇದನ್ನು ಅರಿಯಲು ಅವನಿಗೆ ಸಾಧ್ಯವಿಲ್ಲ, ಪ್ರವೇಶವನ್ನು ದೊರಕಿಸಿದರೂ ಸಹ ವ್ಯಾಪಾರದ ಒಂದೊಂದು ಶಾಖೆಯನ್ನು ಅರ್ಥ ಮಾಡಿಕೊಳ್ಳುವುದರಲ್ಲೇ ಜೀವಮಾನ ಕಳೆದುಹೋಗುತ್ತದೆ.

ಅದೃಷ್ಟವಶದಿಂದಲೋ, ದುರದೃಷ್ಟವಶದಿಂದಲೋ ನಾನು ಈ ವಿಷಮ ಚಕ್ರದಲ್ಲಿ ಸಿಲಕಿಕೊಂಡೆ. ಪ್ರಥಮ ಪರೀಕ್ಷೆಯಲ್ಲೇ ಉತ್ತೀರ್ಣನಾಗಿ ಯಶಸ್ಸು ಗಳಿಸಿದೆ. ಆದುದರಿಂದ ಮುಗಿಲುಹಳ್ಳಿಯ ವರ್ತಕ ಸಂಘದಲ್ಲಿ ನನಗೆ ಪ್ರವೇಶ, ಮನ್ನಣೆ ದೊರೆಯಿತು. ಆ ಕಥೆಯನ್ನು ಕೇಳಿ.

ಒಂದು ದಿನ ದಾರಿ ತಪ್ಪಿ ಚೌಕೀಪೇಟೆಯಲ್ಲಿ ಹೋಗುತ್ತಿದ್ದೆ. 'ಮುಗಿಲುಹಳ್ಳಿ ಮಲ್ಲಪ್ಪ & ಸನ್ಸ್'ರವರ ಅಂಗಡಿಯ ಬಳಿ ಯಾಕೋ ನಿಂತೆ. ಒಳಗಿನಿಂದ 'ಇಗೋ ನೋಡ್ರಿ ಇವನ್ನೇ ನಾನು ಹೇಳಿದ್ದು' ಎಂದು ಕೂಗಿದ ನನ್ನ ಮಿತ್ರ ಶಿವಯೋಗಿ. 'ಬಾರೋ ತಮ್ಮಾ' ಎಂದರು ಮುಗಿಲು ಹಳ್ಳಿ ಮಲ್ಲಪ್ಪನವರು, ಎಂದರು.

"ಎಲ್ಲಿವರೆಗೂ ಓದಿದೆ" ಎಂದರು.

"ಆಗಿದೆ ಸರ್ ಬೀಯೆ"

"ಇಂಗ್ಲೀಸ್ ಬರ್ತತೆ ಅನ್ನು" ಎಂದರು.

"ಬರುತ್ತೆ ಸರ್"

"ಏನ್ಮಾಡ್ತಾ ಅದಿ?"

"ಏನು ಇಲ್ಲ ಸರ್"

"ಹಂಗಾದ್ರೆ ಇಲ್ಲಿ ಗುಮಾಸ್ತಿಕೆಗೆ ಸೇರ್ತಿಯಾ?"

"ನನಗೆ ವ್ಯವಹಾರ ಗೊತ್ತಿಲ್ಲ ಸರ್"

"ಹಂಗಾರೆ ಕಲಿ. ಬಾಯಲ್ಲಿ ಇಂಗ್ಲಿಸ್ನಗೆ ತಾರ್ ಕೊಡ್ಬೆಕು, ಅಡಚ್ಣೆ ಆಗೆತೆ" ಎಂದರು. ಆ ಮಾತಿನ ಮೋಡಿಗೆ ಮುಗ್ಧನಾದ ನಾನು ಹೋದೆ.

'ಟೆಲಿಗ್ರಾಂ ಫಾರಂ ನೋಡೆದಿಯಾ?' ಎಂದರು.

'ಹೂಂ'

"ಕೊಡು ಬೆಂಗಳೂರಿಗೆ ಗೋಣೀವಾಲ ಅಡ್ರಸ್ಸಿಗೆ"

"ಏನೆಂದು ಕೊಡಲಿ"

" ಹತ್ಸಾವರ ಬಿಳಿ ಹಾಳಿ ಹತ್ಸಾವರ ಕರಿ ಹಾಳಿ ಕಳ್ಸು "

" ಹಾಗೆಂದರೆ ಏನು "

" ತವಮಾ ಹೇಳ್ದಷ್ಟ್ ಬರಿ. ಏನಾರ ಆಗ್ಲಿ ನಿನಗೇನಂತೆ? ನಿನಗೆ ಇಂಗ್ಲಿಸ್ ಬರ್‍ತತೋ ಇಲ್ಲೇ? ಕೊಡು ಮತೆ."

ಏನು ಮಾಡುವುದು? ಕೊಟ್ಟೆ.

' Goniwala Bangalore. Send ten thousand white white paper ten thousand black paper' ಎಂದು. ಮಲ್ಲಪ್ಪ ನವರು ನೋಡಿದರು.

' ಯಾಕೋ ಶಬ್ದ ಫರಕಾಗ್ತತಲ್ಲೋ ತವಮಾ, ಸರಿ ಬೇಯೇ ಒಥೆದಿ ಅಂತೀ, ಸರಿ ಬಿಡು. ಲೇ ಬುಡೇ ನೀ ತಾರು ಕೊಟ್ಬಾ ಹೋಗು' ಎಂದರು. ಅವನು ಕೊಟ್ಟು ಬಂದ.

ಮಧ್ಯಾಹ್ನ ಉತ್ತರ ಬಂದಿತು ' wire not clear reply ' ಎಂದು. ಸಾಹುಕಾರರಿಗೆ ತೋರಿಸಿದೆ. ಕ್ಯಾನ್ಸಲ್ ಮಾಡಿಬಿಡು ಎಂದರು.

' Received, order cancelled dont send ' ಎಂದು ತಂತಿ ಕೊಟ್ಟೆ. ಮೂರು ಗಂಟೆಗೆ ಉತ್ತರ ಬಂತು ಗೋಣೀವಾಲನಿಂದ. ' one ordered never Cancell sending evening' ' ಕಳ್ಸಬ್ಯಾಡ ಡೆಲಿವರಿ ತಗಂಬಲ್ಲ, ಹುಂಡಿಕೊಡಲ್ಲ ಅಂತ ಜಡಿಯೋ ತಾರು' ಎಂದರು ಸಾಹುಕಾರ್ರು. ಜಡಿದೆ ತಾರು: Dont send not taking delivery not giving hundi.

ಅದಕ್ಕೆ ಅಲ್ಲಿಂದ ಉತ್ತರ ಬಂತು: If delivery no taken filing civil criminal case, ಎಂದು.

ಸಾಹುಕಾರರು ಅದನ್ನೋದಿ, " ಇವರಪ್ಪನ ಮನೇದು ಇನ್ನೇ ಏನು ಕಂಡಿರದು ಇವನ್ನಲ್ಲ ಇವ್ನಪ್ಪನ್ನ ಬಲ್ಲೆ ಕೊಡಲ್ಲ ಏನ್ಮಾಡ್ಕೆಂತಿ ಮಾಡಿಕೋ ಹೋಗು ಅಂತ ಕೊಡು" ಎಂದರು. ಕೊಟ್ಟೆ ಟೆಲಿಗ್ರಾಂ.

' Have you only seen court; Seen you, also your father. Dont care not taking delivery '

ಕೊಡುವುದೇನೋ ಕೊಟ್ಟೆ ಆದರೆ ಭಯವಾಯಿತು. ಏನು ಕಳಿಸು ಎಂದು ಟೆಲಿಗ್ರಾಂ ಕೊಟ್ಟೆ ಎಂದು ನೀವು ಆಗ ಕೇಳಿದ್ದರೆ ' ನನಗೆ ಗೊತ್ತಿಲ್ಲ' ಎನ್ನ ಬೇಕಾಗಿತ್ತು.


ಮರುದಿನ ಅವರಿಂದ ಕಾಗದ ಬಂತು.

ಶ್ರೀ ಮುಗಿಲುಹಳ್ಳಿ ಮಲ್ಲಪ್ಪ & ಸನ್ಸ್ ಇವರಿಗೆ ನಿಮ್ಮ ಟೆಲಿಗ್ರಾಂ ಬಂತು. ಅದರಂತೆ ಹತ್ತು ಸಾವಿರ ಬಿಳಿ ಹಾಳಿ ಗುಂಟೂರು ಒಂದು ಭರ್ತಿ ಖಾಲೀ ಚೀಲ ಹತ್ತುಸಾವಿರ ಕರಿಹಾಳಿ ಒಂದು ಭರ್ತಿ ಚೀಲ ಕಳಿಸಿಕೊಡುತ್ತೇವೆ. ವಿಶ್ವಾಸವಿರಲಿ

ಇಂತಿ ಶರಣಾರ್ತಿಗಳು.

ಆಗ ಈ ಗಲಭೆಯ ಕಾರಣವೇನು ವಸ್ತು ಯಾವುದು ಎಂದು ತಿಳೀತು. ಮಧ್ಯಾಹ್ನಕ್ಕೆ ಮಾಲು ಸಹಾ ಲಾರಿಯಲ್ಲಿ ಬಂತು. ಡೆಲಿವರಿ ತೆಗೆದುಕೊಂಡಾಯಿತು. ಎನ್ನಿ ಇನ್ನು ಇಷ್ಟೆಲ್ಲಾ ಟೆಲಿಗ್ರಾಂಗಳ ಓಡಾಟವೇಕೆ ಎಂದು ನೀವು ಕೇಳಿದರೆ ನೀವು ವ್ಯಾಪಾರಸ್ತರಲ್ಲ ಎಂಬುದೇ ಉತ್ತರ. ಹೀಗೆ ಯುದ್ಧವನ್ನು ನಡೆಸಿದ್ದಕ್ಕಾಗಿ ನನ್ನ ಮೇಲೆ ಸಾಹುಕಾರರ ಕೃಪಾದೃಷ್ಟಿ ಬಿತ್ತು. 'ಇವನು ಯೋಗ್ಯ ಅದನೆ ಅಂತ ಆತು' ಎಂದು ಅವರು ಸ್ವಗತ ಹೇಳಿಕೊಂಡದ್ದೂ ಕಿವಿಗೆ ಬಿತ್ತು. ಅಂದಿನಿಂದ ಇಂದಿನವರೆಗೆ ಮುಗಿಲುಹಳ್ಳಿ ಟಪಾಲು ಗುಮಾಸ್ತರ ಗುಂಪಿನಲ್ಲಿ ನನ್ನ ಸ್ಥಾನ ಹಿರಿದಾಗಿಯೇ ಇದೆ. ಆದುದರಿಂದಲೇ ನನಗೆ ಮಾರ್ಕೆಟ್ ಸುದ್ದಿ ತಿಳಿಯುತ್ತಿರುತ್ತದೆ.

—ಅ. ರಾ. ಸೇ.



"ನಮ್ಮಪ್ಪನಿಗೆ ಬಡ್ಕೊಂಡೆ ಕಷ್ಟಪಟ್ಟು M. A. ಓದಿ, ಮಾಡ್ತೀನಿ ಅಂತ, ಕೇಳ್ಲಿಲ್ಲ ದುಡ್ಡು ಕೊಟ್ಟು ಪ್ಯಾಸ್ ಮಾಡಿಸ್ಬುಟ್ರು, ಈಗ ನನ್ನ ಕ್ಲಾಸ್‌ಗೆ ಯಾರು ಬರೊಲ್ಲ

ಜಾಕಿ ಆಟ

ಅದೋ ನೋಡು ಆಟ! ಅದೇ ಜಾಕಿ ಆಟ! ಇಪ್ಪತ್ತೆಂಟರಾಟ! ಹೌದು! ಗುಲಾಮಾಟ! ಸ್ಪೇಟಾಟಕೆಲ್ಲ ನಿಜಕ್ಕು ರಾಜ ಆಟ.

ಕಲಸುತಾನೆ ನೋಡು, ಏನಾ ಕೈಯ ಥಳಕ! ಒಬ್ಬನಿಗೆ ಕರಡು, ಒಬ್ಬನಿಗೆ ಕನಕ! ಹಂಚುತಾನೆ ನೋಡು, ಡಿಪ್ಪಿಟ್ಟ ಬಳಿಕ!

ಪಟ್ಟಿ ಮೇಲೆ ದುಡ್ಡು, ಯಾರಿಗಿದೆಯೋ ದೆಸೆ, ಒಬ್ಬನೆಂದ ಬಿಡ್ಡು! ಮೇಲೆ ಹೇಳುವಾಸೆ, ಆದರೆಲೆಯೆ ಗೊಡ್ಡು, ಉತ್ಸಾಹಕೆ ನಿರಾಸೆ.

ಬೇಸ್ತಾದವ ಸುಸ್ತು! ಎಲೆಯ ಮೇಲೆ ಕೋಪ! "ಏತಕಾದೆ ಬೇಸ್ತು?" ಈಗ ಪಶ್ಚಾತ್ತಾಪ. ನೀರೊಳಗಿಳಿದಾಯ್ತು, ಮಳೆ; ಚಳಿ, ಗಾಳಿ ನೆಪ!

"ಇರಲಿ ಮೇಲೊಂದು," ಎಂದೆ ನಲಿವಕಡೆಗೆ, "ಹೋದರೆ ಮೋಜೊಂದು, ರಿಸ್ಕೇತಕೆ ತನಗೆ? ಟ್ರಂಪ್ ಹೇಳಿಕೊ" ಎಂದ ಬಿಟ್ಟನವ ಕಡೆಗೆ.

"ಟ್ರಂಪ್ ಆಟೇನು" ರೋಪಿನೊಡದೆ ಕೋಪ! ಇಳಿತ ಬರಲಿ ಸೀನು!" ಸೀನು ಇಳಿತ ಶಾಪ! ಡಿಪ್ಪು ಅದೇ ನೈನು! ಇನ್ನೇನಾಟ ತೋಪೆ!

ಆ ಇಳಿತ ಅವ ಇಳಿದ, ಅವನೋ ಶುದ್ಧ ಪೆದ್ದ! ಈ ಎಲೆ ಇವ ಬಡಿದ, ಆಟಗಾರ ಗೆದ್ದ! ರಾಮು ನಾಣಿ ಬೈದ, ಇವ ದುಡ್ಡೆಳೆದಿದ್ದ!

ಶುರುವಿನ್ನು ಕಾದಾಟ, ನೂರಾರು ಬೈದಾಟ! ಹತ್ತು ಮನೆಗೆ ಕಾಟ, ತಪ್ಪು, ಅವನಾಟ, ತಪ್ಪು ಇವನಾಟ, ಸುಮ್ಮನೆ ಕಿರಿಚಾಟ!

ಇದೇ ನೋಡು ಆಟ, ಇದೇ ಜಾಕಿ ಆಟ! ಇಪ್ಪತ್ತೆಂಟರಾಟ, ಹೌದು! ಗುಲಾಮಾಟ! ಸ್ಪೇಟಾಟಕೆಲ್ಲ ನಿಜಕ್ಕೂ ರಾಜ ಆಟ!

—"ಕಿಟ್ಟಣ್ಣ"

— ೦ —

ಮಾಡದೇ ಇದ್ದರೆ ಮರತೇ ಹೋಗುತ್ತೆ

ಯಾವುದನ್ನೇ ಆಗಲೀ ಮಾಡ್ತಾ ಇರಬೇಕು. ಇಲ್ಲದಿದ್ದರೆ ಮರೆತೇ ಹೋಗುತ್ತೆ. ಚಿಟ್ರಿ ಹೋಯಿತು. ಕಲ್ಚರ್ರು (Culture) ಅನ್ನೋದು ಅದೇ ; ಅದರಲ್ಲೇ ಇದೆ ಕಲ್ಚರ್ರು. ಹಿಂದಿನ ಕಾಲದಿಂದ ಬಂದ ತರಹಾನೇ ಕೊಂಚ ಮಾಡುತ್ತ ಹೋಗಬೇಕು. ಹೊಸದನ್ನು ಕೈಹಿಡಿದಾಗಲೂ ಹಳೆಯದನ್ನು ಕೈಬಿಟ್ಟಿರಬಾರದು.

ಸಿಮೆಂಟ್ ನೆಲವಾದರೂ ಗೋಮಯ ಮಾಡಲೇಬೇಕು. ಪಿಂಗಾಣಿ ತಟ್ಟೆಯಿಂದ ತಿಂದರೂ ಬಾಳೆ ಎಲೆ ಅದರಲ್ಲಿ ಹಾಸಿರಬೇಕು ನಂತರ ಆ ಎಲೆಯನ್ನೇ ಗೋಗ್ರಾಸಕ್ಕೆಂದು ತಿನ್ನಿಸಬೇಕು. ಮಕ್ಕಳಿಗೆ ಹಸುವಿನ ಹಾಲನ್ನೇ ಕುಡಿಸಬೇಕು. (ಎಮ್ಮೆ ಹಾಲನ್ನು ಹಸುವಿನ ಹಾಲು ಮಾಡುವ ಕ್ರಮ: ಎಮ್ಮೆ ಹಾಲು ಒಂದು ಲೀಟರು + ನಲ್ಲಿ ನೀರು ಎರಡು ಲೀಟರು + ಒಂದು ಚಿಟಿಗೆ ಅರಿಸಿನ ಪುಡಿ = ಹಸುವಿನ ಹಾಲು). ಮನೆಯೊಳಗೆಲ್ಲ ಚಪ್ಪಲಿ ಹಾಕಿಕೊಂಡು ನಡೆಯಬಾರದು. ಷರಾಯಿ, ಷೂ, ಹಾಕಿಕೊಂಡಿದ್ದವರಿಗೆ ಮಾತ್ರ ಮೇಜಿನಮೇಲೂಟ, ಪಂಚೆಯುಟ್ಟವರಿಗೆ ಮಣೆಯ ಮೇಲೆ ಕೂತು ನೆಲದ ಮೇಲೆ ಭೋಜನ.

ಟೀ ಪಾರ್ಟಿ ಮಾಡಿದರೂ ತೆಂಗಿನಕಾಯಿ ಕೊಟ್ಟು ಕಳಿಸಬೇಕು. ಸಿಗರೇಟು ಸೇದಬಾರದು, ನಶ್ಯ ಹಾಕಿಕೊಳ್ಳಬಹುದು. ಕಾಫಿ ಕುಡಿಯಬಾರದು, ಕೊತ್ತಂಬರೀ ಬೀಜದ ಕಷಾಯ ಕುಡಿಯಬಹುದು. ಮದುವೆ ಪ್ರಸ್ತ ಎಂದರೆ ಪುಳ್ಳಂಗಾಯಿ ಉಂಡೆ ಮಾಡಲೇಬೇಕು. ಅವೆರಡರ ನಡುವೆ ಒಂದು ದಿನ ಚಿಗಳಿ ಉಂಡೆ ಮಾಡೇ ತೀರಬೇಕು. ಕಾಲ ಬದಲಾಯಿಸಿದೆ ಎಂತ ಬಿಟ್ಟುಬಿಡಬಾರದು.

ನದಿ ನೀರು ಶ್ರೇಷ್ಠ, ನಲ್ಲಿ ನೀರು ಕನಿಷ್ಟ, ಅದರಲ್ಲಿನ ಕ್ಲೋರೀನ್ ಅನಿಷ್ಟ. ನಂದಾದೀಪ ಶ್ರೇಷ್ಟ, ಎಲೆಕ್ಟ್ರಿಕ್ ದೀಪ ನೀಚ. ಐದು ಬೆರಳಿಂದ ತಿಂದರೆ ಮೃಷ್ಟಾನ್ನ, ಚಮಚದಿಂದ ತಿಂದರೆ ಮ್ಲೇಚ್ಛ, ಫೋರ್ಕಿನಿಂದ ತಿನ್ನುವವನು ಕಟುಕ. ಕೊಟ್ನದ ಅಕ್ಕಿಯಿಂದ ಹೊಟ್ನೋವು ಬರೋದಿಲ್ಲ; ಮಿಲ್ ಅಕ್ಕಿ ತಿಂದರೆ ಪಿಲ್ ನುಂಗಬೇಕಾಗುತ್ತೆ. ಆಗಲೂ ಹರಳೆಣ್ಣೆ ಉತ್ತಮ, ಪ್ಯಾರಾಫಿನ್ ಖನಿಜ.

ಉತ್ಸವಾದಿಗಳಲ್ಲಿ ಕೋಲಾಟ ಚೆನ್ನ, ಬಯಲಾಟ ಚೆನ್ನ, ಮೆರವಣಿಗೆಗಳಲ್ಲಿ ಸೂಳೆಕುಣಿತ ಚೆನ್ನ ; ದೊಂಬರಾಟ ಚೆನ್ನ—ಸರ್ಕಸ್ಸು ರಷ್ಯನ್.

ಹಿಂದಿನ ಕಾಲದಿಂದ ಬಂದದ್ದನ್ನು ಬಿಟ್ಟುಬಿಡಬಾರದು. ಚೇಳು ಕಡಿದರೆ ಮಂತ್ರ ಹಾಕಿಯೇ ವಿಷ ಇಳಿಸಬೇಕು. ಮದ್ದೀಡು ಹಾಕುವ ಪದ್ಧತಿ ಇಟ್ಟು ಕೊಂಡಿರುವವರು ಆಗಾಗ್ಗೆ ಅದನ್ನು ಹಾಕುತ್ತಲೇ ಇರಬೇಕು, ಈಗಿನ ಕಾಲದ ಫೋಲಿಡಾಲ್ (Folidol) ಕ್ರಿಮಿನಾಶಕಾನ ಹಾಕಬಾರದು. ಮಾಟ ಮಾಡು ವವರು ಬೇರೆ-ಆಟಕ್ಕೆ ಕೈಹಾಕಬಾರದು.

ದುರ್ಗಿಗುಡಿ ಎದುರಿಗೆ ಕೋಣ ಕಡಿಯುವುದನ್ನು ಬಿಡಬಾರದು, ಮೋಟಾರನ್ನು ಸಾಯಿಯ ಮೇಲೆ ಬಿಟ್ಟು ಮಾರೀದೇವತೆಯ ತೃಪ್ತಿಯಾಯಿತು ಎಂದಂದುಕೊಳ್ಳ ಬಾರದು. ಬೊಂಬಾಯಿ ತರಹದ ಫ್ಲ್ಯಾಟ್‌ನಲ್ಲಿದ್ದರೂ ಕಿವಿಗೆ ಜನಿವಾರ ಸುತ್ತಿ ಕೊಳ್ಳುವುದನ್ನು ಬಿಡಬಾರದು. ಕ್ರಾಪು ಬಿಟ್ಟರೂ ಅದರ ನಡುವೆ ಸಣ್ಣದೊಂದು ಜುಡಿಮೆ ಬಿಟ್ಟಿರಲೇಬೇಕು.

ಏಕಾದಶೀ ದಿನ.ಅನ್ನ ತಿಂದರೂ ಅದಕ್ಕೆ ಅರಿಸಿನ ಹಚ್ಚಿರಬೇಕು. ಫಲಗಳು ಇಲ್ಲದಿರುವ ಊರಲ್ಲಿ 'ಫಳಾರ' ಮಾಡಬಹುದು, ಅನ್ನ ತಿನ್ನಬಾರದು.

ಪ್ರತಿಯೊಬ್ಬರೂ ಒಂದೊಂದು ಮಠಕ್ಕೆ ಸೇರಿರಬೇಕು; ಅರ್ಜುನ–ಸನ್ಯಾಸಿ ಗಾದರೂ ಪಾದ ಪ್ರಕ್ಷಾಳನೆ ಮಾಡಿ, ಪಾದಪೂಜೆ, ಮಾಡಿ, ಭಿಕ್ಷೆ ಮಾಡಲೇಬೇಕು. ಆ ಸನ್ಯಾಸಿ ಗೈರ್‌ವಿಲೇ ಆದರೆ ಬೇರೊಂದು ಮಠಾ ಸೇರಬೇಕು.

ಟೊಮ್ಯಾಟೋ ತಿನ್ನಬಾರದು, ಬದನೇಕಾಯಿ ತಿನ್ನಬಾರದು, ಶ್ರೀಮನ್ಮಧ್ವ ನಾಮುದಗುಳ್ಳ ತಿನ್ನಬಹುದು; ಸೀಮೆ ಬದನೆಯನ್ನು ಮುಟ್ಟಲೇಬಾರದು. ಹಾಗಲ ತಿನ್ನಬಹುದು, ಅದು ನಮ್ಮ ದೇಶದ ಕಡಿ. ಬೇವು ಬೆಲ್ಲ ತಿನ್ನಬೇಕು, ಕ್ವಿನೈನ್–ಶಾಖ್ಖರಿನ್ (quinine–saccharine) ತಿನ್ನಬಾರದು.

ಮಕ್ಕಳಾಗದಿದ್ದರೆ ನಾಗಪ್ರತಿಷ್ಟೆ ಮಾಡಿಸಬೇಕು, ಆಪರೇಷನನ್ನಲ್ಲ ಸಂತಾನ ಬೆಳೆದರೆ ನಂದಗೋಕುಲ (ಸ್ಕೂಲು ಕಾಲೇಜುಗಳಲ್ಲಿ ಸೀಟು ಸಿಕ್ಕದಿದ್ದರೂ) ಮಿತ ಸಂತಾನವಿದ್ದರೆ ಲಿವಿಂಗ್ ಸ್ಟಾಂಡರ್ಡ್ ಹೆಚ್ಚಾಗುತ್ತೆ ಅಂತ ಹಳೇ ಸ್ಟಾಂಡರ್ಡನ್ನು ಕೆಳಗಿಳಿಸುವುದೇ?

ಹಿಂದಿನವರ ರೀತಿ ರುಮಾಲು ಕಟ್ಟಬೇಕು, ಅಥವಾ ಟೋಪಿ ಹಾಕಿಕೊಂಡಿರ ಬೇಕು. (ಹೇರ್‌ಕಟ್ ಮಾಡಿಸದಿದ್ದರೂ ಕಾಣಿಸುವುದಿಲ್ಲ); ಈಗಿನ ತರಹದ ಕ್ರ್ಯೂಕಟ್ (Crew-Cut) ತರವಲ್ಲ.

ಹಿಂದಿನ ತರಹದ್ದನ್ನು ಇಟ್ಟುಕೊಂಡಿದ್ದರೆ ಕಲ್ಚರ್ರು. ರಾಷ್ಟ್ರಪತಿಯೆದರು ಕುಣಿಯುವುದಕ್ಕೆ ತೋರಿಸುವುದಕ್ಕೆ ಹಳೇ ಕಲ್ಚರು ಅಗತ್ಯ. ಕಲರ್ ಫೋಟೊ

ಗ್ರಫಿಗೂ ಅನುಕೂಲ. ಭರತನಾಟ್ಯದ ಕಚ್ಚೆ ಹಾಗೇ ಬಿಗಿಯಾಗಿರಬೇಕು. ಅದು ಅಷ್ಟು ಭದ್ರವಿಲ್ಲದಿದ್ದರೆ ಭರತ ಮಹಾರಾಜನು ಒಪ್ಪುತ್ತಿರಲಿಲ್ಲ.

ರಂಗೋಲಿಯೇ ಕಲ್ಚರು, ಮಾವಿನ ತೋರಣ ಕಲ್ಚರು, ತುಳಸೀಗಿಡ ಕಲ್ಚರು. ಸಾಲು ಮರಗಳಿಗೆಲ್ಲ ಸುಣ್ಣ ಕೆಮ್ಮಣ್ಣು ಪಟ್ಟೆ ಬಳಿಯುತ್ತಿದ್ದ ಕಲ್ಚರಿತ್ತು, ಅದನ್ನು ಬಿಡಬಾರದು, ಎಲೆಕ್ಟ್ರಿಕ್ ಕಂಬಗಳಿಗಾದರೂ ಸುಣ್ಣ-ಕೆಮ್ಮಣ್ಣುಪಟ್ಟೆ ಬಳಿಸುವುದು ಒಳ್ಳೆಯದು.

ಓದುವುದಕ್ಕೆ ವ್ಯಾಸಪೀಠ ಉತ್ತಮ. ಬೈಂಡುಮಾಡದ ಓಲೆಗರಿಗಳು ಈಗಿನ ಇಂಡೆಕ್ಸ್ ಕಾರ್ಡುಗಳಂತೆಯೇ ಉಪಯುಕ್ತವಾಗಿತ್ತು. ಬಾಯಿಂದ ಡಂಗೂರ ಸಾರುವುದನ್ನು ಬಿಡಬಾರದು. ಲೌಡ್‌ಸ್ಪೀಕರಿನ ಮೂಲಕ ಬಡುಕೊಳ್ಳುವುದು ಅನಾಚಿತ. ಶಂಖಂದಧ್ಮೌ ಪೃಥಕ್‌ಪೃಥಕು ಎಂದು ಶ್ರೀ ಕೃಷ್ಣ ಶಂಖ ಊದಲಿಲ್ಲವೇ, ಅದೇ ಚೆನ್ನ, ಏರ್‌ರೆಯ್ಡ್ ಸೈರೆನ್ ಕರ್ಣಕಠೋರ. ಈಗಿನ ಕಾಲದವರು ಬಹು ಬೇಗ ಸುಳ್ಳು ಹೇಳಿಬಿಡುತ್ತಾರೆ; ಅದಕ್ಕಿಂತ 'ಅಶ್ವತ್ಥಾಮೋಹತಃ (ಕುಂಜರಃ)' ಎನ್ನುವುದು ಸಾಧು! ಕ್ರಿಶ್ಚೇವ್‌ತರಹ ಕೂಗಾಡಬಾರದು, ನಮ್ಮ ಹಳೇಕಾಲದಿಂದ ಬಂದಿರುವ ಚಾಣಕ್ಯ ನೀತಿ ಬಿಡಬಾರದು..

ಹಿಂದಿನ ಕಾಲದ ಹೆಂಗಸರಲ್ಲಿ ಎಷ್ಟೊಂದು ಕಲ್ಚರ್ ಇರುತ್ತಿತ್ತು! ನಾಗ ಮುರಿಗೆ, ಪರಟಡ್ಡಿಕೆ, ಗೊಂಡೆ, ಚಳತುಂಬು, ಕೆನ್ನೆ ಸರಪಣಿ, ಬುಲಾಕು, ಮುಖರ, ಜಡೆಬಿಲ್ಲೆ, ಡಾಬು—ಕಂಕಣದ ಕಿಂಕಿಣಿಯ ಝುಂಕೃತಿಯು ಎಷ್ಟು ಚೆನ್ನಾಗಿ ಒಪ್ಪುತ್ತಿತ್ತು! ಈಗ ಜಾರ್ಜೆಟ್ಟು, ಲಿಪ್‌ಸ್ಟಿಕ್, ಪೌಡರ್, ಹ್ಯಾಂಡ್ ಬ್ಯಾಗ್-ಇವೆಲ್ಲಾ ಕಲ್ಚರ್ರೇ? ಜಾರ್ಜೆಟ್ ಸೀರೆ ಉಟ್ಟರೆ ಸೆರಿಕಲ್ಚರ್ (sericulture), ಗುಲಾಬಿಹೂ ಮುಡಿದರೆ ಹಾರ್ಟಿಕಲ್ಚರ್ (horticulture), ಕೃತಕ ವಜ್ರವನ್ನಿಟ್ಟುಕೊಂಡರೆ ಕಲ್ಚರ್ ಡೈಮಂಡ್ ಎಂತ ತೃಪ್ತಿಪಟ್ಟುಕೊಂಡರೆ—ನಮ್ಮ ಹಿಂದಿನವರ ಸಂಪ್ರದಾಯಗಳೆಲ್ಲಾ ಮಾಯವಾಗಿ ಹೋಗುತ್ತವಲ್ಲ!

ಯೂನಿವರ್ಸಿಟಿ ವೈಸ್‌ಛಾನ್ಸಲರುಗಳು, ಪ್ರೊಫೆಸರುಗಳಾದರೂ ತಲೆಗೆ ಲಕ್ಷಣವಾಗಿ ರುಮಾಲಿಟ್ಟುಕೊಂಡು ಕಿವಿಗೆ ವಜ್ರದ ಕಡಕುಗಳನ್ನು ಹಾಕಿಕೊಳ್ಳುವಂತೆ ಮಾಡಿದರೆ, ನಮ್ಮ ಕಲ್ಚರನ್ನು ಕಾಪಾಡಿಕೊಳ್ಳಬಹುದು ಎಂತ ಒಂದು ಸಲಹೆ!

—ಡೂನು.

— ★ —

ಸೋಮು ಸಂಕಟ

ಮೈಗಳ್ಳರ ಸಂಘದಲ್ಲಿ ರಾಷ್ಟ್ರೀಯ ಶುದ್ಧೀಕರಣ ದಿನಾಚರಣೆ ಟೀ ಪಾರ್ಟಿ ಮುಗಿಸಿ ಮನೆ ಸೇರುವ ಹೊತ್ತಿಗೆ ಶೌರಿ ಕಾಣಲಿಲ್ಲ.

"ಶೌರೀ!"

"ಸರ್" ಅನ್ನುತ್ತಾ ಎಲ್ಲಿಂದಲೋ ಅವತರಿಸಿದ.

"ವರಾಂಡಾದಲ್ಲಿನ ಛತ್ರಿ ಯಾರದು?"

"ಸೋಮಸುಂದರ ರಾಯರದು ಸರ್"

"ಯಾರು? ಸೋಮು? ಏನಂತೆ? ಯಾವಾಗ ಬಂದ? ಎಷ್ಟು ಹೊತ್ತಿನಿಂದ ಕಾದಿದ್ದಾನೆ?"

ಸ್ವಲ್ಪ ಆಶ್ಚರ್ಯದಿಂದಲೇ ಕೇಳಿದೆ. ಸೋಮು ಬಾಳೇಪುರದ ಮುಕುಂದ ರಾಯರ ಅಣ್ಣನ ಮಗ. ತಂದೆ ತೀರಿದ ಮೇಲೆ ಚಿಕ್ಕಪ್ಪ ಸಾಕಿದರು. ಇಂಟರ್ ದಾಟಲಾರದೆ, ಬಾಳೇಪುರದ ಹಳ್ಳಿವಾಸ ಸಹಿಸಲಾರದೆ, ಪೇಟೆ ಸೇರಿ ಬಿಸಿನೆಸ್ ಮಾಡ್ತಾ ಇದ್ದಾನೆ. ಬಾಳೇಪುರದಲ್ಲಿ ತಿನ್ನೋಕೆ ನಾಕು, ತಿರಗೋಕೆ ಸಾಲದು. ಸೋಮುದು ಸ್ವಲ್ಪ ಅಹಂ ಸ್ವಾಭಾವ. ನನ್ನ ಸ್ನೇಹಿತರಲ್ಲೆಲ್ಲಾ ಸ್ವಚ್ಛ ಹಸ್ತದವ. ಹತ್ತು ಜನರು ಹೋಟೆಲಿಗೆ ನುಗ್ಗಿದರೆ ಎಲ್ಲರ ಖರ್ಚನ್ನೂ ತಾನೇ ಕೊಡಬೇಕೆಂಬ ಒಳ್ಳೆಯ ಸಂಪ್ರದಾಯಸ್ಥ. ಅವನು ಈ ರೀತಿ ನನ್ನನ್ನು ಹುಡುಕಿಕೊಂಡು ಬಂದಿದ್ದು ಕೇಳಿ ಸಂತೋಷವಾಯ್ತು. ಇಂತಹ ಸ್ನೇಹಿತನಿಗೆ ಏನಾದರೂ ಸಹಾಯ ಬೇಕಾದರೆ ನಾನು ಮಾಡಲು ಸದಾ ಸಿದ್ಧ.

"ಸೋಮಸುಂದರರಾಯರು ನಿಮ್ಮನ್ನಲ್ಲ ಸರ್ ಕೋರಿಬಂದದ್ದು, ನನ್ನನ್ನು" ಅಂದ ಶೌರಿ.

"ನಿನ್ನೇ ಶೌರಿ? ನಿನಗೂ ಸೋಮೂಗೂ ಹೇಗೆ ಸಂಬಂಧ?"

"ಜನಸಾಕ್ಷಿಯ ಸಂಪಾದಕರು ಪ್ರಹ್ಲಾದರಾಯರು ನನ್ನ ಹತ್ತಿರ ಕಳುಹಿಸಿದ್ದಾರೆ ಸರ್. ಏನೋ ಸ್ವಲ್ಪ ತೊಡಕಿನ ವಿಷಯದಲ್ಲಿ ಸ್ವಲ್ಪ ಅಭಿಪ್ರಾಯ ಕೇಳೋಕೆ"

"ಓಹೋ!" ಅಂದು ಸುಮ್ಮನಾದೆ.

ಸೋಮು ಭೇಟಿಯಾದ.

"ಹಲೋ—ಪಾಂಡು...."

"ಹಲೋ ಸೋಮು. ಏನಯ್ಯ ಸಮಾಚಾರ?"

"ಹೆಚ್ಚೇನಿಲ್ಲ, ಮಧ್ಯಾಹ್ನ ಬಂದೆ. ಪಾಂಡು, ನಿನ್ನೊಂದು ವಿಷಯ ಕೇಳ ಬೇಕೂಂತ...."

ಶೌರಿ ತಂದಿಟ್ಟ ಹುರಿಗಾಳನ್ನು ಬಾಯಿಗೆ ಹಾಕಿಕೊಳ್ಳುತ್ತಾ ಕುಳಿತೆವು. ಸೋಮು ನನ್ನ ಹತ್ತಿರಕ್ಕೆ ಸರಿದು ಬಂದು ಕಿವಿಯಲ್ಲಿ ಹೇಳತೊಡಗಿದ.

" ಪಾಂಡು, ' ಮನಶ್ಶಾಸ್ತ್ರ' ಅಂದರೇನು ? "

ನಾನು ಏನು ಹೇಳಲಿ ?

" ಮನಶ್ಶಾಸ್ತ್ರ ಅಂದರೆ—ಸೋಮು, ಅಂದರೆ—ಅದೊಂದು ಶಾಸ್ತ್ರ. ಅದರಲ್ಲಿ ನಮ್ಮ ಶೌರಿ ಬಹಳ ನಿಪುಣ " ಅಂದೆ.

ನನ್ನ ವರ್ಣನೆಯಿಂದ ಸೋಮೂಗೆ ಮನಶ್ಶಾಸ್ತ್ರದ ಬಗ್ಗೆ ಏನೇನೂ ಅರ್ಥ ವಾದ ಹಾಗೆ ಕಾಣಲಿಲ್ಲ.

" ನಾನು ಕೇಳಿದ್ದು, ಪಾಂಡು, ಮನಶ್ಶಾಸ್ತ್ರ ಅಂದರೆ ಏನು ಅಂತ ! "

" ಹೇಳ್ತೀನೆ ಸೋಮು. ಆದರೆ ನಿನ್ನ ತಾಪತ್ರಯ ಏನು ಹೇಳು ? "

" ನಿನಗೆ ನನ್ನ ಚಿಕ್ಕಪ್ಪ– ಮುಕುಂದರಾಯರು ಗೊತ್ತೇ ? "

" ಗೊತ್ತು ! "

ಗೊತ್ತು, ಬಾಳೇಪುರದ ಮುಕುಂದರಾಯರು ನಮ್ಮ ಮನೆಗೂ ಬರುತ್ತಿದ್ದರು. ಬಹಳ ಸ್ವತಂತ್ರವಾದಿಗಳು. ಅವರನ್ನು ನೋಡಿದಾಗಲೆಲ್ಲಾ ಮುಸೋಲಿನೀನ ನೋಡಿದ ಹಾಗಾಗುತ್ತೆ, ಏಕೋ—ಏನೋ.

" ಈಗ ನೋಡು ಪಾಂಡು. ನಾನು ಬಾಳೇಪುರ ಬಿಟ್ಟು ಇಲ್ಲಿಗೆ ಬಂದು, ಇಲ್ಲಿ ಬಿಸಿನೆಸ್ ಮಾಡ್ತಾ ಇರೋದು ಅವರಿಗೆ ಸುತರಾಂ ಇಷ್ಟವಿಲ್ಲ. ಆದರೆ ನನಗೆ ಬಾಳೇಪುರದಲ್ಲಿರೋಕೇ ಅಷ್ಟೇ ಸುತರಾಂ ಇಷ್ಟವಿಲ್ಲ. ನಾಡಿದ್ದು ನನ್ನ ಚಿಕ್ಕಪ್ಪ ಇಲ್ಲಿಗೆ ಬರ್ತಾರಂತೆ. ನನ್ನ ಬಿಸಿನೆಸ್ ನೋಡಿ, ಅದರಿಂದ ನನ್ನ ಉದ್ಧಾರವಾಗ ಲಾರದು ಅಂತ ಅವರಿಗೆ ತೋರಿದರೆ ಪುನಃ ನನ್ನನ್ನು ಬಾಳೇಪುರಕ್ಕೆ ಒಯ್ಯುತ್ತಾರೆ. ಅದೇ ಒಪ್ಪಿಗೆ ಮೇಲೆ ಆರು ತಿಂಗಳ ಕೆಳಗೆ ನಾನು ಬಿಸಿನೆಸ್ ಷುರುಮಾಡಿದ್ದು."

" ಈ ವಿಷಯ ಶೌರಿಯ ಹತ್ತಿರ ಹೇಳಿದ್ದೀಯಾ ? "

" ಹೇಳಿದೆ ಪಾಂಡು. ಅದಕ್ಕೇ ಅವನು ಅದೇನೋ ಮನಶ್ಶಾಸ್ತ್ರ ಉಪ ಯೋಗಿಸಿ ನನಗೆ ಪರಿಹಾರ ತೋರಿಸ್ತೀನಿ ಅಂತ ಅಭಯ ಕೊಟ್ಟಿದ್ದಾನೆ "

" ಓಹೋ ! "

" ಅದೇ ಮನಶ್ಶಾಸ್ತ್ರ ಉಪಯೋಗಿಸಿ, ಪಲ್ಲು–ಶಶಿಕಲಾ ಮದುವೆಗೆ ಸಹಾಯ ಮಾಡಿದನಂತೆ "

" ಹೌದೌದು. ನನ್ನ ಬೆಕ್ಕನ್ನೂ ಬಲಿಕೊಟ್ಟಿದ್ದ."

" ಅದೇ ಪಾಂಡು ನಾನು ಕೇಳಿದ್ದು—ಮನಶ್ಶಾಸ್ತ್ರ ಅಂದರೇನು ಅಂತ " ?

ರಾತ್ರಿ ಊಟ ಮಾಡಿ ರೇಡಿಯೋ ಕೇಳುತ್ತ ಕುಳಿತಾಗ ಈ ವಿಚಾರ ಪುನಃ ಬಂತು.

" ಶೌರಿ "

" ಸರ್ "

" ಸೋಮೂ ವಿಷಯ.... "

" ಯೋಚಿಸಿದ್ದೇನೆ ಸರ್. ತಾವು ಸ್ವಲ್ಪ ಅವರಿಗೆ ಸಹಾಯ ಮಾಡಿದರೆ ಎಲ್ಲಾ ಸರಿಹೋಗಬಹುದು ಸರ್"

" ಶೌರಿ ! ಸೋಮೂ ಬಗ್ಗೆ ಏನೇ ಖರ್ಚಾದರೂ ಪರವಾಗಿಲ್ಲ"

" ದುಡ್ಡೇನು ಬೇಕಾಗಿಲ್ಲ ಸರ್. ಮುಕುಂದರಾಯರು ಇಲ್ಲಿಗೆ ಬಂದಾಗ ಸೋಮಸುಂದರರಾಯರು ತಮ್ಮ ಬಿಸಿನೆಸ್‌ನಲ್ಲಿ ತುಂಬಾ ಉದ್ಧಾರವಾಗಿದ್ದಾರೆ— ಉದ್ಧಾರವಾಗುತ್ತಾರೆ ಅಂತ ತೋರಿದರೆ ಸಾಕು ಸರ್"

ನನಗೆ ಮೊದಲ ಬಾರಿಗೆ ಸೋಮು ಏನು ಬಿಸಿನೆಸ್ ಮಾಡ್ತಾ ಇದ್ದಾನೆ ಅಂತ ಕುತೂಹಲವಾಯ್ತು.

" ಸೋಮು, ನಿನ್ನ ಬಿಸಿನೆಸ್ ಏನು ?"

ಸೋಮು ಬೆಚ್ಚಿದ.

" ಮುಂದೆ ಬಿಸಿನೆಸ್ ಸರಿಹೋದರೆ, ಷೇರು ವ್ಯಾಪಾರ ಮಾಡಬೇಕೂಂತ. ಈಗ ಸಧ್ಯಕ್ಕೆ ಅದೂ ಇದೂ ಕೊಳ್ಳೋದು, ಮಾರೋದು"

" ಇದುವರಿಗೂ ಏನೇನು ಕೊಂಡು ಮಾರಿದ್ದಿ ?"

" ಇದುವರಿಗೂ ಎರಡು ಸೈಕಲ್ ಮಾರಿದ್ದೀನಿ. ಒಂದು ನಂದು, ಒಂದು ಪಲ್ಲೂದು. ಮತ್ತು ನಾನು ಶೇಖರಿಸಿಟ್ಟಿದ್ದ ಹಳೇ ಪೇಪರು, ಪತ್ರಿಕೆಗಳು."

" ಅದು ಸರಿ. ನಿನ್ನ ಜೀವನ .."

" ನನ್ನ ಚಿಕ್ಕಪ್ಪ ತಿಂಗಳಿಗೆ ರೂ. 75/- ಕಳಿಸ್ತಾ ಇದ್ದಾರೆ. ಈಗ ಬಿಸಿನೆಸ್ ಪ್ರಯೋಜನವಿಲ್ಲಾಂತ ತಿಳಿದರೆ, ಬಾಳೇಪುರಕ್ಕೆ ಹೋಗಿ ಜಮೀನು ನೋಡ್ಕೋಬೇಕಾಗುತ್ತೆ."

ವಿಷಯ ನಾನು ತಿಳಿದಿದ್ದಕ್ಕಿಂತ ತೊಡಕೇ !

" ಶೌರಿ ! ನಿನ್ನ ಯೋಚನೆ ಏನು ?"

" ಇಷ್ಟೆ ಸರ್. ಮುಕುಂದರಾಯರು ಬರುವ ಹೊತ್ತಿಗೆ ಸೋಮಸುಂದರ ರಾಯರು ಇಲ್ಲೇ ಇದೇ ಮನೆಯಲ್ಲೇ ಇರಲಿ. ಇದೇ ಅವರ ಮನೆ. ಓಪೆಲ್ಲೇ ಅವರ ಕಾರು. ನಾನು ಅವರ ಕ್ಲಾರ್ಕು ಸರ್."

" ನಾನು ಶೌರಿ ?"

" ಸೋಮಸುಂದರರಾಯರ ಅತಿಥಿಯಾಗಿ ಅಲ್ಲೇ ಇರಬಹುದು ಸರ್"

" ಹಾಗಿದ್ದರೆ ಮುಕುಂದರಾಯರಿಗೆ ಸೋಮೂ ಮೇಲೆ ಭರವಸೆ ಬರುತ್ತೆ ಅಂತೀಯಾ ಶೌರಿ ?"

" ಬರಲೇಬೇಕು ಸರ್"

" ಮನಶ್ಶಾಸ್ತ್ರದ ಪ್ರಕಾರವೇ ಶೌರಿ ?"

" ಹೌದು ಸರ್ !"

ಶೌರಿಯ ಸಲಹೆಗೆ ಒಮ್ಮತ ಸಮ್ಮತ ದೊರೆಯಿತು. ಸೋಮು ಗಾಣಿಗರ ಹಟ್ಟಿಯಲ್ಲಿ ಮೂರನೆಯ ಮಹಡಿಯ ಮೇಲಿದ್ದ ತನ್ನ ಬಿಡಾರದಿಂದ ತನ್ನ ಹಾಸಿಗೆ ಟ್ರಂಕು ತಂದ.

ಮುಕುಂದರಾಯರು ಬಂದರು. ಸೋಮು, ಶೌರಿ ಇಬ್ಬರೂ ಅವರನ್ನು ಉಪಚರಿಸಿದರು. ಮುಕುಂದರಾಯರು ತಮ್ಮ ಅಣ್ಣನ ಮಗನ ವಿಷಯದಲ್ಲಿ ಹಿಗ್ಗಿದರು. ಓಪೆಲ್ಲಿನಲ್ಲಿ ಮೈಸೂರೆಲ್ಲಾ ಸುತ್ತಿದರು. ಮೂರನೆಯ ದಿನ ರಾತ್ರಿ ಬೃಂದಾವನ ನೋಡಿ ಬಂದು ಊಟ ಮುಗಿಸಿ ರೇಡಿಯೋ ಮುಂದೆ ಕುಳಿತಿದ್ದೆವು.

"ಸೋಮು" ಅಂದರು ಮುಕುಂದರಾಯರು.

"ಏನು ಚಿಕ್ಕಪ್ಪ?"

"ನಾಳೆ ಬೆಳಿಗ್ಯೆ ನನ್ನ ಬಾಳೇಪುರದ ಬಸ್ಸು ಹತ್ತಿಸಿಬಿಡಪ್ಪಾ"

"ಇಷ್ಟು ಬೇಗ ಹೊರಡ್ತೀಯಾ ಚಿಕ್ಕಪ್ಪ? ಏನು ಅವಸರ?"

"ಹೋಗಬೇಕು ಸೋಮು. ಕೊಯ್ಲು ಬಂತು" ಸೋಮು ಸುಮ್ಮನಿದ್ದ.

"ಸೋಮು ನೀನು ಇಷ್ಟರವುಟ್ಟಿಗೆ ಈ ಪಟ್ಟಣದಲ್ಲಿ ಅದ್ದೂರಿಯಿಂದ ಇರೋದು ನನಗೆ ತುಂಬಾ ಸಂತೋಷ. ನಿನ್ನ ಚಿಕ್ಕಮ್ಮನಿಗೆ, ನಿನ್ನ ಅಮ್ಮನಿಗೆ ಹೇಳ್ತೀನೆ. ಆದರೆ ಸೋಮು ನೀನು ಹುಷಾರಾಗಿರಬೇಕು. ಏನೂ ಕೆಲಸವಿಲ್ಲದ ಉಂಡಾಡಿ ಭಟ್ಟರನ್ನೆಲ್ಲಾ ಸೇರಿಸ್ಕೋಬೇಡ"

ಸೋಮು ತುಟಿ ಕಚ್ಚಿಕೊಂಡ. ಶೌರಿ ಹಾಲಿನ ದೊಡ್ಡ ಗಡಿಯಾರಕ್ಕೆ ಕೀ ಕೊಡಲು ಬೆಂಚಿನ ಮೇಲೆ ಹತ್ತಿದ. ನಾನು ಈಶಾನ್ಯ ಮೂಲೆಯಲ್ಲಿ ಒಂದು ನೊಣವನ್ನು ತಿನ್ನುತ್ತಿದ್ದ ಜಾಡರ ಹುಳುವನ್ನು ನೋಡುತ್ತಾ ಇದ್ದೆ.

"ಆಮೇಲೆ ಸೋಮು ಈಗ ಇಲ್ಲಿ ನಿನಗೆ ಸಾಕಷ್ಟು ವರಮಾನವಿರುವ ಹಾಗೆ ಕಾಣಿಸುವುದರಿಂದ-ನಾನು ತಿಂಗಳು ತಿಂಗಳಿಗೂ ಕಳಿಸ್ತಾ ಇರೋ 75 ನಿಲ್ಲಿಸ್ತೇನೆ. ನಂಗೂ ಸ್ವಲ್ಪ ತೊಂದರೆ ಈಗ"

ಶೌರಿ ಅವನ ಜನ್ಮದಲ್ಲಿ ಮೊದಲಬಾರಿಗೆ-ಮುಗ್ಗರಿಸಿ ಬೆಂಚಿನಿಂದ ಬಿದ್ದ ನಾನು, ಸೋಮು, ಮುಕುಂದರಾಯರು ಅವನನ್ನು ಎತ್ತಿದೆವು. ದೊಡ್ಡ ಗಡಿಯಾರದ ಚೂರುಗಳನ್ನು ಆಮೇಲೆ ಅವನೇ ಒಟ್ಟುಮಾಡಿದ.

ಬೆಳಿಗ್ಯೆ ಎದ್ದೊಡನೆ ಮುಕಂದರಾಯರನ್ನು ಬಾಳೇಪುರದ ಬಸ್ಸಿಗೆ ಹತ್ತಿಸಿ ಬಂದ-ಸೋಮು.

"ಇದೊಂದು ನಾನು ನಿರೀಕ್ಷಿಸದಿದ್ದ ಪರಿಣಾಮ ಸರ್" ಅಂದ ಶೌರಿ.

"ಎಲ್ಲವನ್ನೂ ನಿರೀಕ್ಷಿಸಬೇಕು ಶೌರಿ" ಅಂದೆ.

"ಹೌದು ಸರ್" ಅಂತ ಒಪ್ಪಿಕೊಂಡ.

"ಇನ್ನು ಮುಂದೇನು?"

"ಮುಂದೇನಿಲ್ಲ ಎಲ್ಲಾದರೂ ಒಂದು ಜವಾನ ಚಾಕ್ರಿಯೋ, ಮಾಣಿಗಾರಿಕೆಯೋ ನೋಡಿಕೊಂಡು ಜೀವನ ಸಾಗಿಸೋದು ಅಷ್ಟೆ!" ಅಂದ ಸೋಮು.

ನನ್ನ ಸ್ನೇಹಿತನ ನಿರಾಶಾವಾದ ನನಗೆ ಸರಿ ಬೀಳಲಿಲ್ಲ. ಆದರೆ ಅವನ ಮೊಂಡುತನ ನನಗೆ ಗೊತ್ತು. ಬೇರೊಬ್ಬರನ್ನೂ ಎಂದೂ ತಾಪತ್ರಯ ಪಡಿಸುವವನಲ್ಲ. ಈಗ ಹೇಗಾದರೂ ಮಾಡಿ ಅವನಿಗೆ ತಿಳಿಯದಂತೆ ಸಹಾಯ ಮಾಡಿ ಅವನನ್ನು ಮೇಲಕ್ಕೆತ್ತಬೇಕು ಅಥವಾ....

" ವಿಚಾರ ಅಷ್ಟು ನಿರಾಶೆಯದಲ್ಲ ಸರ್. ಬೇಕಾದಷ್ಟು ರೀತಿಯಲ್ಲಿ ಸ್ವಲ್ಪ ಬಂಡವಾಳದಲ್ಲಿ ದೊಡ್ಡ ಬಿಸಿನೆಸ್ ಮಾಡಬಹುದು. ನನ್ನ ಅಕ್ಕನಭಾವನ ಅಳಿಯನ ಅಣ್ಣ ಆರೇ ತಿಂಗಳಲ್ಲಿ ಸಾವಿರಾರು ರೂಪಾಯಿ ಸಂಪಾದಿಸಿದ್ದಾನೆ ಸರ್"

" ಎಂತಹ ಬಿಸಿನೆಸ್ ಶೌರಿ ನಿನ್ನ ಅಕ್ಕನ ಭಾವನ ಅಳಿಯನ ತಮ್ಮಂದು ?"

" ಅಳಿಯನ ತಮ್ಮಂದಲ್ಲ ಸರ್. ಅಣ್ಣಂದು ಕೂದಲು ತೈಲದ ಬಿಸಿನೆಸ್"

" ಮಾರ್ಕೆಟ್ಟಿನಲ್ಲಿ ಸಾವಿರಾರು ಇವೆಯಲ್ಲಾ ಶೌರಿ ಆದರೂ ಎಲ್ಲಿ ನೋಡಿದರೂ ಕೃಷ್ಣೋವ್ ಬುರುಡೆಯವರೇ ಜಾಸ್ತಿ !"

" ಇರಬಹುದು ಸರ್. ಮೊದಲು ನನ್ನ ಅಕ್ಕನ ಭಾವನ ಅಳಿಯನ ಅಣ್ಣ ..."

" ಶೌರಿ-ಅವನನ್ನು ಕು ಅಂತ ಕರಿ ಸಾಕು"

" ಸರಿ ಸರ್ ಮೊದಲು 'ಕು' ಒಂದು ತೈಲ ತಯಾರಿಸಿ 'ಕೇಶವರ್ಧಕ' ತೈಲ ಅಂತ ಮಾರಿದರು ಸರ್ ಬಿಸಿನೆಸು ಆಗಲಿಲ್ಲ. ಆಮೇಲೆ ಅದೇ ತೈಲವನ್ನು ನನ್ನ ಸಲಹೆಯ ಮೇಲೆ 'ಕೇಶಧ್ವಂಸಿನಿ' ತೈಲ ಅಂತ ಮಾರುತ್ತಿದ್ದಾರೆ ಸರ್. ಈಗ ಸಾವಿರಾರು ರೂಪಾಯಿ ದುಡೀತಿದ್ದಾನೆ-ಕು"

" ಹಾಗಾದರೆ ಈಗ ಸೋಮೂನೂ ಕು ಹಾಗೆ ಮಾಡಬೇಕೇನು ?"

" ಅದೇ ರೀತಿ ಬೇಕಿಲ್ಲ ಸರ್. ಈ ಹೊಸ ತೈಲ ತಲೆಗೆ ಹಚ್ಚುವಾಗ ಅಂಗೈಗೆ ತಗುಲಬಾರದು ಸರ್ ತಗುಲಿದರೆ ಅಂಗೈ ಮೇಲೆ ಕೂದಲು ಬೆಳೆಯುವ ಭಯವಿದೆ ಸರ್. ಆದ್ದರಿಂದ ತೈಲದ ಜೊತೆ ಪ್ಲಾಸ್ಟಿಕ್ ಸಲಕರಣೆ ಒದಗಿಸಬೇಕು ಸರ್"

" ಇದೂ ಜನರ ಮನಶ್ಶಾಸ್ತ್ರ ಅವಲಂಬಿಸಿದೆಯೇ ಶೌರಿ ?"

" ಹೌದು ಸರ್"

ಶೌರಿಯ ಸಲಹೆ ಕೇಳಿ ಶೌರಿಯ ತಲೆಯಲ್ಲಿ ಮಿದುಳಿದೆಯೋ ಕರುಳಿದೆಯೋ ಸಂಶಯವಾಯ್ತು. ಎಂತಹ ಮಂತ್ರಕ್ಕೂ ವಿರಾಮಕಾಲ ಬೇಕು. ಹಾಗೇ ಶೌರಿಯ ತಲೆಗೂ ವಿರಾಮ ಅಗತ್ಯ ಅಂದುಕೊಂಡೆ.

" ಶೌರಿ ನೀನು ನಿಜವಾಗಿ ನನ್ನನ್ನು ಉದ್ಧಾರ ಮಾಡಿದೆ. ನನ್ನ ತೈಲ ಎಷ್ಟು ನಾಜೂಕು ಅಂದ್ರೆ ಅಂಗೈಗೆ ಸೋಕಿದ ಅಲ್ಲೇ ಕೂದಲು ಬೆಳೆಯುತ್ತೆ ಜನರು ಹೇಗೆ ಬೀಳ್ತಾರೆ ಗೊತ್ತಾ ಶೌರಿ ?"

—ಸೋಮು ಹುಮ್ಮಸ್ಸಿನಿಂದ ಹೇಳಿದ.

ನಾನು ಅವರಿಬ್ಬರನ್ನೂ ಅಲ್ಲೇ ಬಿಟ್ಟು ಮಲಗಲು ಹೋದೆ.

ಸೋಮುವಿನ "ಕೇಶರಾಶಿ" ತೈಲ ಶುರುವಾಗಿ ಆರುತಿಂಗಳಾದವು. ತೈಲ ಹಚ್ಚಿಕೊಳ್ಳುವ ಪ್ಲಾಸ್ಟಿಕ್ ಬ್ರಷ್ಷಿನ ಜೊತೆ ಈಗ ಒಂದು ಹಣಿಗೆಯನ್ನೂ ಸೇರಿಸಿದ್ದಾನೆ. ಒಂದು ವಾರದ ಕೆಳಗೆ ಒಂದು ಬೆಡ್‌ಫೋರ್ಡ್ ವ್ಯಾನ್ ಬೇರೆ ಕೊಂಡಿದ್ದಾನೆ.

ಆದರೆ ಇದುವರೆವಿಗೂ ನನಗೆ ಕೇಶರಾಶಿಯ ಸ್ಯಾಂಪಲ್ ಕೂಡ ಸೋಮುವಾಗಲಿ ಶೌರಿಯಾಗಲಿ ಕೊಟ್ಟಿಲ್ಲ.

" ಕೇಫ "






For 3 way Beauty Treatment....
RAJA SNOW
RAJA AMLA
RAJA Kasturi Soap
RAJA
SNOW
AMLA HAIR OIL, KASTURI SOAP
MANYAM & CO. BANGALORE MADRAS MADURAI BOMBAY.

REG. NO. M. 4718 KORAVANJI NOV 1960

Increase Output



INSTALL

Kirloskar

ESTD. 1888

CENTRIFUGAL PUMPING SETS

Built for rugged and continuous service KIRLOSKAR pumpsets feature the latest in design development. Increasingly popular in irrigation projects, these pump-sets combine trouble free service and low maintenance costs. Available in different types and sizes.

For Particulars:

KIRLOSKAR BROTHERS, LTD.

SRI NARASIMHARAJA ROAD

Post Box 606 : : BANGALORE-2

Printed by B. S. Iyengar, Bangalore City.
Publisher—B. N. Gupta. Editor—M. Sivaram.